ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2513

ಉತ್ತರಿಸಬೇಕಾದ ದಿನಾಂಕ : 16.03.2021.

ಸದಸ್ಯರ ಹೆಸರು : ಶ್ರೀ ತನ್ವೀರ್ ಸೇಠ್ (ನರಸಿಂಹರಾಜ)

ಉತ್ತರಿಸುವ ಸಚಿವರು : ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

ಕ್ರ ಸಂ	ಪ್ರಶ್ನೆ	ಉತ್ತರ	Reply
ಅ)	ಮೈಸೂರು ನಗರದಲ್ಲಿ ಅಂತರರಾಷ್ಟ್ರೀಯ ಮಟ್ಟದ ಕ್ರಿಕೆಟ್ ಕ್ರೀಡಾಂಗಣ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ವಿವರ ನೀಡುವುದು)	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಮೈಸೂರು ನಗರದಲ್ಲಿ ಅಂತರರಾಷ್ಟ್ರೀಯ ಮಟ್ಟದ ಕ್ರಿಕೆಟ್ ಕ್ರೀಡಾಂಗಣ ನಿರ್ಮಿಸುವ ಪ್ರಸ್ತಾವನೆ ಪ್ರಸ್ತುತ ಇರುವುದಿಲ್ಲ.	There is no proposal for construction of International Level Cricket Stadium in Mysore by the Department of Youth Empowerment and Sports, at present.
ಆ)	2021-22ನೇ ಸಾಲಿನ ಆಯವ್ಯಯದಲ್ಲಿ ಸದರಿ ಕಾಮಗಾರಿಗೆ ನಿಗದಿಪಡಿಸಿರುವ ಅನುದಾನವೆಷ್ಟು?	ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.	From above answer, this question does not arise.

ವೈಎಸ್‌ಡಿ-ಇಬಿಬಿ/36/2021.

(ಡಾ|| ನಾರಾಯಣ ಗೌಡ)
ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	2452
ಸದಸ್ಯರ ಹೆಸರು	:	ಶ್ರೀ ಗಣೇಶ್ ಜೆ.ಎನ್. (ಕಂಪ್ಲಿ)
ಉತ್ತರಿಸಬೇಕಾದ ದಿನಾಂಕ	:	16.03.2021
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

****

	ಪ್ರಶ್ನೆ	ಉತ್ತರ
ಅ)	ಕಂಪ್ಲಿ ವಿಧಾನಸಭಾ ಕ್ಷೇತ್ರದ ಇಟಗಿ ಗ್ರಾಮದಲ್ಲಿ 110KV ವಿದ್ಯುತ್ ಉಪಕೇಂದ್ರ ಮಂಜೂರಾತಿಯಾಗಿರುವುದು ಸರ್ಕಾರದ ಗಮನಕ್ಕಿದೆಯೇ;	ಕಂಪ್ಲಿ ವಿಧಾನಸಭಾ ಕ್ಷೇತ್ರದ ಇಟಗಿ ಗ್ರಾಮದಲ್ಲಿ 110 ಕೆ.ವಿ. ವಿದ್ಯುತ್ ಉಪಕೇಂದ್ರ ಸ್ಥಾಪಿಸುವ ಪ್ರಸ್ತಾವನೆಯು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ತಾಂತ್ರಿಕ ಸಮನ್ವಯ ಸಮಿತಿ ಸಭೆಯಲ್ಲಿ ಅನುಮೋದನೆಗೊಂಡಿದ್ದು, ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸಲಾಗುತ್ತಿದೆ.
ಆ)	ಹಾಗಿದ್ದಲ್ಲಿ, ಉಪಕೇಂದ್ರದ ಕಾಮಗಾರಿ ಕಾರ್ಯ ಯಾವ ಹಂತದಲ್ಲಿದೆ; ಯಾವಾಗ ಪೂರ್ಣಗೊಳಿಸಲಾಗುವುದು? (ಪೂರ್ಣ ಮಾಹಿತಿ ನೀಡುವುದು)	

ಸಂಖ್ಯೆ: ಎನರ್ಜಿ 74 ಪಿಪಿಎಂ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

<u>ಕರ್ನಾಟಕ ವಿಧಾನ ಸಭೆ</u>

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: **2419**

ಉತ್ತರಿಸಬೇಕಾದ ದಿನಾಂಕ : 16/03/2021

ಸದಸ್ಯರ ಹೆಸರು : ಶ್ರೀ ಅಭಯ್ ಪಾಟೀಲ್ (ಬೆಳಗಾಂ ದಕ್ಷಿಣ)

ಉತ್ತರಿಸುವ ಸಚಿವರು : ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

***

ಕ್ರ.ಸಂ.	ಪ್ರಶ್ನೆ	ಉತ್ತರ	Reply
ಅ)	ರಾಜ್ಯದಲ್ಲಿ ಯಾವ ಯಾವ ನಗರ, ಪಟ್ಟಣ ಹಾಗೂ ಗ್ರಾಮಗಳಲ್ಲಿ ನೂತನ ಕ್ರೀಡಾಂಗಣಗಳನ್ನು ನಿರ್ಮಿಸುವ ಉದ್ದೇಶವನ್ನು ಹೊಂದಲಾಗಿದೆ; ಈ ಕುರಿತು ಯಾರು ಯಾರು ಗಣ್ಯರುಗಳು ಪ್ರಸ್ತಾವನೆಗಳನ್ನು ಸಲ್ಲಿಸಿದ್ದಾರೆ;	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ 29 ಜಿಲ್ಲಾ ಕೇಂದ್ರಗಳಲ್ಲಿ ಮತ್ತು 121 ತಾಲ್ಲೂಕು ಕೇಂದ್ರಗಳಲ್ಲಿ ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆ. ಉಳಿದ ಜಿಲ್ಲಾ ಕೇಂದ್ರಗಳು, ತಾಲ್ಲೂಕು ಕೇಂದ್ರಗಳಲ್ಲಿ ಕ್ರೀಡಾಂಗಣಗಳನ್ನು ಹಾಗೂ ಹೋಬಳಿ ಕೇಂದ್ರಗಳು ಮತ್ತು ಗ್ರಾಮ ಮಟ್ಟದಲ್ಲಿ ಆಟದ ಮೈದಾನಗಳನ್ನು ನಿವೇಶನ ಲಭ್ಯತೆ ಆಧರಿಸಿ ನಿರ್ಮಿಸಲು ಉದ್ದೇಶಿಸಲಾಗಿದೆ. ಈ ಕುರಿತು ಗಣ್ಯರು ಸಲ್ಲಿಸಿರುವ ಪ್ರಸ್ತಾವನೆಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.	In 29 district headquarters and in 121 taluk headquarters Stadia have been constructed by Youth Empowerment and Sports Department. It is intended to construct Stadia in the remaining district and taluk headquarters, and playfields at hobli and village level based on the availability of suitable land. The proposals submitted by people's representatives and departments for construction of stadia and creation of sports infrastructure is enclosed in Annexure.
ಆ)	ಬೆಳಗಾವಿ ದಕ್ಷಿಣ ಮತ ಕ್ಷೇತ್ರದ ಯಳ್ಳೂರು ಗ್ರಾಮದಲ್ಲಿ ಕ್ರೀಡಾಂಗಣ ನಿರ್ಮಿಸುವ ಉದ್ದೇಶವು ಸರ್ಕಾರಕ್ಕೆ ಇದೆಯೇ;	ಹೌದು. ಸದರಿ ನಿವೇಶನದಲ್ಲಿ ಪೆವಿಲಿಯನ್ ಕಟ್ಟಡ, ಗ್ಯಾಲರಿ, ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್, ಸಿಂಥೆಟಿಕ್ ಹಾಕಿಟರ್ಫ್, ಸಿಂಥೆಟಿಕ್ ಫುಟ್ಬಾಲ್ ಟರ್ಫ್, ಈಜುಕೊಳ ಮತ್ತು ವಿವಿದೋದ್ದೇಶ ಒಳಾಂಗಣ ಕ್ರೀಡಾಂಗಣ ಒಳಗೊಂಡಂತೆ ಕ್ರೀಡಾ ಮೂಲಸೌಕರ್ಯಗಳನ್ನು ರೂ.50.00 ಕೋಟಿ ವೆಚ್ಚದಲ್ಲಿ ಕಲ್ಪಿಸಲು ಭಾರತ ಸರ್ಕಾರದ ಖೇಲೋಇಂಡಿಯಾ ಯೋಜನೆಯಡಿ ಅನುದಾನ ಕೋರಿ, ಪ್ರಸ್ತಾವನೆಯನ್ನು ದಿನಾಂಕ: 17-02-2021 ರಂದು ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯಕ್ಕೆ ಸಲ್ಲಿಸಲಾಗಿದೆ.	Yes. A detailed proposal of Rs 50.00 crores for construction of pavilion building, gallery, synthetic athletic track, synthetic hockey turf, synthetic football turf, swimming pool, multi-purpose indoor hall and other sporting infrastructure has been submitted to Ministry of Youth Affairs and Sports, Government of India for sanction under Khelo India scheme on 17-02-2021.
ಇ)	ಹಾಗಿದ್ದಲ್ಲಿ, ಎಷ್ಟು ಎಕರೆ ಪ್ರದೇಶದಲ್ಲಿ ಕ್ರೀಡಾಂಗಣವನ್ನು ನಿರ್ಮಿಸಲಾಗುವುದು; (ವಿವರ ನೀಡುವುದು)	ಬೆಳಗಾವಿ ದಕ್ಷಿಣ ಮತಕ್ಷೇತ್ರದ ಯಳ್ಳೂರು ಗ್ರಾಮದಲ್ಲಿ ಕ್ರೀಡಾ ಸೌಲಭ್ಯಗಳನ್ನು ಸೃಜಿಸಲು ಸೂಕ್ತವಾದ 54 ಎಕರೆ ಸರ್ಕಾರಿ ನಿವೇಶನ ಲಭ್ಯವಿರುತ್ತದೆ. ಈ ನಿವೇಶವು ಬೆಳಗಾವಿ ನಗರದ ಎಲ್ಲಾ ಭಾಗಗಳಿಗೆ ಉತ್ತಮ ಸಂಪರ್ಕ ಕಲ್ಪಿಸುವ ಬೆಳಗಾವಿ ರಿಂಗ್ ರಸ್ತೆ ಸಮೀಪದಲ್ಲಿದೆ. ವಿಧಾನ ಸಭೆಯ ಅಂದಾಜುಗಳ ಸಮಿತಿಯ ಸನ್ಮಾನ್ಯ ಅಧ್ಯಕ್ಷರ	55 acres of land suitable for sports infrastructure is available in Yellur Village in Belagavi South Vidhanasabha Constituency. This land parcel is located near the Belagavi Ring Road with easy access to all parts of Belagavi city. The Senior Officers of the Department of Youth Empowerment and Sports have conducted a site inspection in the presence of the

		ಉಪಸ್ಥಿತಿಯಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಹಿರಿಯ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದ್ದು, ಅಂತರ_ರಾಷ್ಟ್ರೀಯ ಕ್ರೀಡಾ ಸೌಲಭ್ಯಗಳನ್ನು ಹೊಂದಿದ ಕ್ರೀಡಾ ಕೇಂದ್ರವಾಗಿ ರೂಪಿಸಲು ಸೂಕ್ತವಾಗಿರುವುದು ಕಂಡು ಬಂದಿರುತ್ತದೆ. ಸದರಿ ನಿವೇಶನವನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಮಂಜೂರು ಮಾಡಿ, ಹಸ್ತಾಂತರಿಸಲು ಕಂದಾಯ ಇಲಾಖೆಯು ಕ್ರಮವಹಿಸಿದ್ದು, ನಿವೇಶನ ಮಂಜೂರಾಗಬೇಕಾಗಿದೆ.	Hon'ble Chairman of the Estimates Committee of the Legislative Assembly and the land has been found to be suitable for development as a Sports Hub. The Revenue Department has initiated measures to sanction the identified land to Department of Youth Empowerment and Sports and the sanction is awaited.
ಈ)	ಈ ಕ್ರೀಡಾಂಗಣದ ನಿರ್ಮಾಣಕ್ಕೆ ಹಾಕಿಕೊಂಡಿರುವ ಸರ್ಕಾರದ ರೂಪುರೇಷೆಗಳೇನು? (ವಿವರ ನೀಡುವುದು)	ಬೆಳಗಾವಿ ದಕ್ಷಿಣ ಮತಕ್ಷೇತ್ರದ ಯಳ್ಳೂರು ಗ್ರಾಮದಲ್ಲಿ ಕ್ರೀಡಾ ಸಂಕೀರ್ಣ ನಿರ್ಮಿಸಲು ರೂ.50 ಕೋಟಿ ವೆಚ್ಚದಲ್ಲಿ ಭಾರತ ಸರ್ಕಾರದ ಖೇಲೋಇಂಡಿಯಾದಡಿ ಕ್ರೀಡಾ ಸಂಕೀರ್ಣಗಳನ್ನು ಜಿಲ್ಲಾ ಕೇಂದ್ರಗಳಲ್ಲಿ ನಿರ್ಮಿಸುವ ಯೋಜನೆಯಲ್ಲಿ ಅನುದಾನ ಕೋರಿ, ಪ್ರಸ್ತಾವನೆಯನ್ನು ದಿನಾಂಕ: 17-02-2021 ರಂದು ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯಕ್ಕೆ ಸಲ್ಲಿಸಲಾಗಿದೆ. ಕೇಂದ್ರ ಪುರಸ್ಕೃತ ಯೋಜನೆಯಾದ ಖೇಲೋಇಂಡಿಯಾ ಯೋಜನೆಯಡಿ ರೂ.50 ಕೋಟಿಗಳ ಅನುದಾನ ಲಭ್ಯತೆಗೆ ಅನುಗುಣವಾಗಿ ನಿರ್ಮಾಣ ಕೆಲಸ ಕೈಗೊಳ್ಳಲಾಗುವುದು.	A detailed project of Rs 50.00 crores has been submitted to Ministry of Youth Affairs and Sports, Government of India under construction of stadia complex at district headquarters in Khelo India scheme on 17-02-2021. The works will be taken up as per the availability of grants of Rs.50 crores under Khelo India scheme.

ವೈಎಸ್ ಡಿ-ಇಬಿಬಿ/34/2021.

(ಡಾ|| ನಾರಾಯಣ ಗೌಡ)
ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು.

ಅನುಬಂಧ				
ಕ್ರೀಡಾಂಗಣ ನಿರ್ಮಾಣ ಕುರಿತು ಜನಪ್ರತಿನಿಧಿಗಳಿಂದ ಮತ್ತು ಇತರರಿಂದ ಸ್ವೀಕರಿಸಿರುವ ಪ್ರಸ್ತಾವನೆಗಳ ವಿವರ :-				
ಕ್ರ. ಸಂ	ಜಿಲ್ಲೆಯಹೆಸರು	ತಾಲ್ಲೂಕು	ಕಾಮಗಾರಿ ವಿವರ	ಪ್ರಸ್ತಾವನೆ ನೀಡಿರುವ ಜನಪ್ರತಿನಿಧಿಗಳ ವಿವರ
1	ಮಂಡ್ಯ	ಮದ್ದೂರು	ಬೆಸಗರಹಳ್ಳಿ, ಶಿವಾರಗುಡ್ಡ ನವೋದಯ ವಿದ್ಯಾಲಯದಲ್ಲಿ ಆಟದ ಮೈದಾನ ನಿರ್ಮಾಣ	ಶ್ರೀ ಮರಿತಿಬ್ಬೇಗೌಡ, ಮಾನ್ಯ ವಿಧಾನ ಪರಿಷತ್ ಸದಸ್ಯರು.
2	ಮಂಡ್ಯ	ಕೆ.ಆರ್. ಪೇಟೆ	ಬೂಕನಕೆರೆ ಗ್ರಾಮದಲ್ಲಿ ಕ್ರೀಡಾಂಗಣ ನಿರ್ಮಾಣ	ಜಿಲ್ಲಾಧಿಕಾರಿಗಳು, ಮಂಡ್ಯಜಿಲ್ಲೆ, ಮಂಡ್ಯ
3	ಮೈಸೂರು	ಟಿ. ನರಸೀಪುರ	ಕೆ.ಹೆಚ್.ಬಿ. ಕಾಲೋನಿಯಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ	ಡಾ|| ಯತಿಂದ್ರಎಸ್. ಮಾನ್ಯಶಾಸಕರು, ವರುಣಕ್ಷೇತ್ರ
4	ಮೈಸೂರು	ಕೆ.ಆರ್.ನಗರ	ಈಜುಕೊಳ ನಿರ್ಮಾಣ	ಶ್ರೀ. ಸಾ.ರಾ. ಮಹೇಶ್, ಮಾನ್ಯ ಶಾಸಕರು.
5	ಮೈಸೂರು	ಕೆ.ಆರ್.ನಗರ	ಒಳಾಂಗಣ ಕ್ರೀಡಾಂಗಣ ನಿರ್ಮಾಣ	ಶ್ರೀ. ಸಾ.ರಾ. ಮಹೇಶ್, ಮಾನ್ಯಶಾಸಕರು.
6	ಬಾಗಲಕೋಟ	ಬಾದಾಮಿ	ತಾಲ್ಲೂಕು ಕ್ರೀಡಾಂಗಣ ನಿರ್ಮಾಣ	ಶ್ರೀಸಿದ್ಧರಾಮಯ್ಯ, ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳು.
7	ಬಾಗಲಕೋಟ	ಬಾದಾಮಿ	ಗುಳೇದ ಗುಡ್ಡಪಟ್ಟಣದಲ್ಲಿ ಕ್ರೀಡಾಂಗಣ ನಿರ್ಮಾಣ	ಶ್ರೀಸಿದ್ಧರಾಮಯ್ಯ, ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳು ಹಾಗೂ ಕ್ರಿಕೆಟ್ ಕ್ಲಬ್ ಅಸೋಸಿಯೆಷನ್
8	ಶಿವಮೊಗ್ಗ	ಶಿರಾಳಕೊಪ್ಪ	ತಾಲ್ಲೂಕು ಕ್ರೀಡಾಂಗಣ ನಿರ್ಮಾಣ	ಶ್ರೀ ಬಿ.ವೈ. ರಾಘವೇಂದ್ರ, ಮಾನ್ಯ ಲೋಕಸಭಾ ಸದಸ್ಯರು
9	ಶಿವಮೊಗ್ಗ	ಭದ್ರಾವತಿ	ಕನಕ ಮಂಟಪ ಆಟದ ಮೈದಾನ ಅಭಿವೃದ್ಧಿ	ಶ್ರೀಬಿ. ಕೆ. ಸಂಗಮೇಶ್ವರ, ಮಾನ್ಯಶಾಸಕರು, ಭದ್ರಾವತಿಕ್ಷೇತ್ರ.
10	ಬೆಳಗಾವಿ	ಹುಕ್ಕೇರಿ	ಸಂಕೇಶ್ವರ ಪಟ್ಟಣದಲ್ಲಿ ಕ್ರೀಡಾಂಗಣ ನಿರ್ಮಾಣ	ಶ್ರೀ. ಎ.ಬಿ. ಪಾಟೀಲ, ಮಾಜಿ ಸಚಿವರು.
11	ರಾಯಚೂರು	ಮಾನ್ವಿ	ತಾಲ್ಲೂಕುಕ್ರೀಡಾಂಗಣನಿರ್ಮಾಣ	ಶ್ರೀ ರಾಜಾ ವೆಂಕಟಪ್ಪ ನಾಯಕ, ಮಾನ್ಯಶಾಸಕರು
12	ಬಳ್ಳಾರಿ	ಕೂಡ್ಲಿಗಿ	ತಾಲ್ಲೂಕು ಕ್ರೀಡಾಂಗಣ ನಿರ್ಮಾಣ	ಶ್ರೀಎನ್. ವೈ. ಗೋಪಾಲಕೃಷ್ಣ, ಮಾನ್ಯ ಶಾಸಕರು.
13	ದಕ್ಷಿಣಕನ್ನಡ	ಬೆಳ್ತಂಗಡಿ	ಬಡಗಕಾರಂದೂರು ಗ್ರಾಮದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ	ಶ್ರೀ ಹರೀಶ್ ಪೂಂಜ, ಮಾನ್ಯ ಶಾಸಕರು

.. … .. 2)

14	ತುಮಕೂರು	ತುಮಕೂರು	ಶ್ರೀ ಸಿದ್ಧಗಂಗಾ ಮಠದ ಆವರಣದಲ್ಲಿ ಒಳಾಂಗಣ ಕ್ರೀಡಾಂಗಣ ಮತ್ತು ಹೊರಾಂಗಣ ಕ್ರೀಡಾಂಗಣ ನಿರ್ಮಾಣ	ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ(ರಿ)
15	ಬೆಳಗಾವಿ	ಬೆಳಗಾವಿ	ಬೆಳಗಾವಿಯಲ್ಲಿ ಯವನಿಕಾ ಸಭಾಂಗಣ ನಿರ್ಮಾಣ	ಶ್ರೀ ಅಭಯ್ ಪಾಟೀಲ್, ಮಾನ್ಯಶಾಸಕರು.
16	ಬೆಳಗಾವಿ	ಬೆಳಗಾವಿ	ಯುವ ಭವನ ನಿರ್ಮಾಣ	ಶ್ರೀ ಅಭಯ್ ಪಾಟೀಲ್, ಮಾನ್ಯಶಾಸಕರು.
17	ಬೆಳಗಾವಿ	ಬೆಳಗಾವಿ	ಬೆಳಗಾವಿ ದಕ್ಷಿಣಕ್ಷೇತ್ರದ ಯಳ್ಳೂರು ಗ್ರಾಮದಲ್ಲಿ ಕ್ರೀಡಾಂಗಣ ನಿರ್ಮಾಣ	ಶ್ರೀ ಅಭಯ್ ಪಾಟೀಲ್, ಮಾನ್ಯಶಾಸಕರು.
18	ಬೆಳಗಾವಿ	ಖಾನಾಪುರ	ವಿವಿದೋದ್ದೇಶ ಒಳಾಂಗಣ ಕ್ರೀಡಾಂಗಣ ನಿರ್ಮಾಣ	ಡಾ|| ಅಂಜಲಿ ಹೇಮಂತ್ ನಿಂಬಾಳ್ಕರ್, ಮಾನ್ಯ ವಿಧಾನ ಸಭಾ ಸದಸ್ಯರು, ಖಾನಾಪುರ
19	ಬೆಳಗಾವಿ	ಬೈಲಹೊಂಗಲ	ಈಜುಕೊಳ ಮತ್ತು ಕುಸ್ತಿ ಅಂಕಣ ನಿರ್ಮಾಣ	ಶ್ರೀ ಮಹಾಂತೇಶ ಶಿವಾನಂದ ಕೌಜಲಗಿ, ಮಾನ್ಯಶಾಸಕರು, ಬೈಲಹೊಂಗಲ ಕ್ಷೇತ್ರ
20	ಬೆಳಗಾವಿ	ಹುಕ್ಕೇರಿ	ತಾಲ್ಲೂಕು ಕ್ರೀಡಾಂಗಣಕ್ಕೆ ಪ್ರೇಕ್ಷಕರ ಗ್ಯಾಲರಿ, ಮಲ್ಟಿಜಿಮ್, ಹೊನಲು ಬೆಳಕು ವ್ಯವಸ್ಥೆ, ಕಬಡ್ಡಿ ಮ್ಯಾಟ್ ಹಾಗೂ ಒಳಾಂಗಣ ಕ್ರೀಡಾಂಗಣ	ಶ್ರೀ ಉಮೇಶ್ ಕತ್ತಿ, ಮಾನ್ಯ ಶಾಸಕರು.
21	ಬೆಳಗಾವಿ	ಗೋಕಾಕ್	ಒಳಾಂಗಣ ಕ್ರೀಡಾಂಗಣ ನಿರ್ಮಾಣ	ಶ್ರೀರಮೇಶ್ ಜಾರಕಿಹೊಳಿ, ಮಾನ್ಯ ಶಾಸಕರು, ಗೋಕಾಕ್
22	ಬೆಳಗಾವಿ	ಚಿಕ್ಕೋಡಿ	ನೇಜ ಗ್ರಾಮದ ಶ್ರೀಚಂದ್ರವ್ವಾ ತಾಯಿ ದೇವಿ ನಾಗರ್ಘುರಿ ಮಠ ಕುಸ್ತಿ ಮೈದಾನದ ಗ್ಯಾಲರಿ ಕಟ್ಟಡ	ಶ್ರೀ ಅಣ್ಣಾಸಾಹೇಬ ಎಸ್.ಜೊಲ್ಲೆ, ಮಾನ್ಯ ಲೋಕಸಭಾ ಸದಸ್ಯರು
23	ಬೆಳಗಾವಿ	ಸವದತ್ತಿ	ಟೆನ್ನಿಸ್ ಆಟದ ಮೈದಾನ	ಶ್ರೀ ಆನಂದ ಚಂದ್ರಶೇಖರ ಮಾಮನಿ, ಮಾನ್ಯ ಉಪಸಭಾಧ್ಯಕ್ಷರು, ವಿಧಾನಸಭೆ
24	ಬೆಳಗಾವಿ	ಕಾಗವಾಡ	ತಾಲ್ಲೂಕು ಕ್ರೀಡಾಂಗಣ ನಿರ್ಮಾಣ	ಶ್ರೀ ಶ್ರೀಮಂತ ಬಾಳಾ ಸಾಹೇಬ ಪಾಟೀಲ, ಮಾನ್ಯ ಕೈಮಗ್ಗ ಮತ್ತು ಜವಳಿ ಸಚಿವರು
25	ಚಿತ್ರದುರ್ಗ	ಚಿತ್ರದುರ್ಗ	ಚಿತ್ರದುರ್ಗ ನಗರ ಸಭಾ ವ್ಯಾಪ್ತಿಯಲ್ಲಿರುವ ಖಾಲಿ ಜಾಗದಲ್ಲಿ ಒಳಾಂಗಣ ಕ್ರೀಡಾಂಗಣ ಹಾಗೂ ಗ್ರಂಥಾಲಯ ನಿರ್ಮಾಣ	ಶ್ರೀ ಜಿ.ಹೆಚ್. ತಿಪ್ಪಾರೆಡ್ಡಿ, ಮಾನ್ಯ ಶಾಸಕರು, ಚಿತ್ರದುರ್ಗ

…… 3)

26	ಬೀದರ್	ಔರಾದ	ತಾಲ್ಲೂಕು ಕ್ರೀಡಾಂಗಣದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ	ಶ್ರೀ. ಪ್ರಭು ಬಿ. ಚವ್ಹಾಣ್, ಮಾನ್ಯ ಪಶುಸಂಗೋಪನೆ ಸಚಿವರು
27	ಬಳ್ಳಾರಿ	ಹಗರಿಬೊಮ್ಮನಹಳ್ಳಿ	ಕೊಟ್ಟೂರಿನಲ್ಲಿ ತಾಲ್ಲೂಕು ಕ್ರೀಡಾಂಗಣ ನಿರ್ಮಾಣ	ಶ್ರೀ ಭೀಮನಾಯ್ಕಎ ಸ್, ಮಾನ್ಯಶಾಸಕರು.
28	ಬಾಗಲಕೋಟ	ಬೀಳಗಿ	ತಾಲ್ಲೂಕು ಕ್ರೀಡಾಂಗಣದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ	ಶ್ರೀ. ಮುರುಗೇಶ ಆರ್. ನಿರಾಣಿ, ಮಾನ್ಯ ಶಾಸಕರು
29	ಬೆಂಗಳೂರು	ದೇವನಹಳ್ಳಿ	ತಾಲ್ಲೂಕು ಕ್ರೀಡಾಂಗಣದಲ್ಲಿ ಕ್ರೀಡಾ ವಸತಿ ನಿಲಯ ನಿರ್ಮಾಣ	ಶ್ರೀ ಬಿ.ಎನ್. ಬಚ್ಚೇಗೌಡ, ಮಾನ್ಯ ಲೋಕಸಭಾ ಸದಸ್ಯರು.
30	ಬೆಂಗಳೂರು	ಕೆ.ಆರ್.ಪುರ	ಪೂರ್ವ ತಾಲ್ಲೂಕು ಕೆ.ಆರ್.ಪುರ ಸರ್ಕಾರಿ ಕಾಲೇಜಿನ ರಾಜೀವ್ ಗಾಂಧಿ ಕ್ರೀಡಾಂಗಣ ಅಭಿವೃದ್ಧಿ	ಶ್ರೀ ಬಿ.ಎ. ಬಸವರಾಜ, ಮಾನ್ಯ ನಗರಾಭಿವೃದ್ಧಿ ಸಚಿವರು
31	ಬೆಂಗಳೂರು	ಚಾಮರಾಜಪೇಟೆ	ಸರ್ಕಾರಿ ಹಳೆಕೋಟೆ ಪ್ರೌಢಶಾಲಾ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ	ಶ್ರೀ ಬಿ.ಜೆಡ್. ಜಮೀರ್ ಅಹಮದ್ ಖಾನ್, ಮಾನ್ಯ ಶಾಸಕರು.
32	ಬೆಂಗಳೂರು	ಯಶವಂತಪುರ	ತಾವರೆಕೆರೆ ಹೋಬಳಿ, ಚನ್ನೆನಹಳ್ಳಿ ಗ್ರಾಮಪಂಚಾಯಿಯಲ್ಲಿ ಕ್ರೀಡಾಂಗಣ ನಿರ್ಮಾಣ	ಶ್ರೀ ಎಸ್.ಟಿ. ಸೋಮಶೇಖರ್, ಮಾನ್ಯ ಸಹಕಾರ ಸಚಿವರು.
33	ಬೆಂಗಳೂರು	ಶಿವಾಜಿನಗರ	ವಾರ್ಡ್ನಂ.93ರ ಎಂ.ವಿ. ಜಯರಾಂ ರಸ್ತೆ ಕೊಡವ ಸಮಾಜ ಪಕ್ಕದಲ್ಲಿ ಕ್ರೀಡಾ ಸಂಕೀರ್ಣ ನಿರ್ಮಾಣ	ಶ್ರೀ ರಿಜ್ವಾನ್ ಅರ್ಷದ್, ಮಾನ್ಯ ಶಾಸಕರು, ಶಿವಾಜಿನಗರ
34	ಯಾದಗಿರಿ	ಶಹಾಪುರ	ಹೊರಾಂಗಣ & ಒಳಾಂಗಣ ಕ್ರೀಡಾಂಗಣ ನಿರ್ಮಾಣ	ಶ್ರೀ. ಶರಣಬಸಪ್ಪ ದರ್ಶನಾಪುರ, ಮಾನ್ಯ ವಿಧಾನಸಭಾ ಸದಸ್ಯರು.
35	ದಾವಣಗೆರೆ	ಹೊನ್ನಾಳಿ	ಶ್ರೀ ಮೃತ್ಯುಂಜಯ ಶಿವಾಚಾರ್ಯ ಕಲಾ ಮತ್ತು ವಾಣಿಜ್ಯ ಕಾಲೇಜು, ಹಿರೇಕಲ್ಮಠ ಇಲ್ಲಿ ಕ್ರೀಡಾಂಗಣ ನಿರ್ಮಾಣ	ಶ್ರೀ ಎಂ.ಪಿ. ರೇಣುಕಾಚಾರ್ಯ, ಮಾನ್ಯ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಗಳು
36	ದಾವಣಗೆರೆ	ನ್ಯಾಮತಿ	ತಾಲ್ಲೂಕು ಕ್ರೀಡಾಂಗಣ ನಿರ್ಮಾಣ	ಶ್ರೀ. ಎಂ.ಪಿ. ರೇಣುಕಾಚಾರ್ಯ, ಮಾನ್ಯ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಗಳು,
37	ಚಾಮರಾಜನಗರ	ಚಾಮರಾಜನಗರ	ವೈದ್ಯಕೀಯ ಕಾಲೇಜು ಆವರಣದಲ್ಲಿ ಹೊರಾಂಗಣ ಮತ್ತು ಒಳಾಂಗಣ ಕ್ರೀಡಾಂಗಣ ನಿರ್ಮಾಣ	ಶ್ರೀ ಎಸ್. ಸುರೇಶ್ ಕುಮಾರ್, ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.
38	ವಿಜಯಪುರ	ಬಸವನಬಾಗೇವಾಡಿ	ತಾಲ್ಲೂಕು ಕ್ರೀಡಾಂಗಣ ನಿರ್ಮಾಣ	ಶ್ರೀ ಶಿವಾನಂದ ಎಸ್. ಪಾಟೀಲ, ಮಾನ್ಯ ಶಾಸಕರು, ಬ.ಬಾಗೇವಾಡಿ

. . . . . 4)

39	ಬೀದರ್	ಕಮಲನಗರ	ತಾಲ್ಲೂಕು ಕ್ರೀಡಾಂಗಣ ಮಂಜೂರು	ಶ್ರೀ ಅರವಿಂದ ಕುಮಾರ ಅರ, ಮಾನ್ಯ ಸದಸ್ಯರು, ವಿಧಾನಪರಿಷತ್
40	ಬೀದರ್	ಭಾಲ್ಕಿ	ಕರಡ್ಯಾಳ ಹತ್ತಿರ ಶ್ರೀ ಚನ್ನಬಸವೇಶ್ವರ ಗುರುಕುಲ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ	ಪೂಜ್ಯ ಡಾ॥ ಬಸವಲಿಂಗಪಟ್ಟ ದೇವರು, ಹಿರೇಮಠ ಸಂಸ್ಥಾನ ಭಾಲ್ಕಿ
41	ಹಾವೇರಿ	ಹಾನಗಲ್	ಬೊಮ್ಮನಹಳ್ಳಿ, ಅರಳೇಶ್ವರ, ಆಡೂರು ಗ್ರಾಮಗಳ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜು ಮೈದಾನದ ಸಮತಟ್ಟು ಮತ್ತು ಕಾಂಪೌಂಡು ನಿರ್ಮಾಣ	ಶ್ರೀ ಸಿ.ಎಂ. ಉದಾಸಿ, ಮಾನ್ಯ ಶಾಸಕರು ಹಾಗೂ ಅಧ್ಯಕ್ಷರು, ಅಂದಾಜು ಸಮಿತಿ
42	ಹಾವೇರಿ	ಹಾನಗಲ್	ಹಿರೇಬಾಸೂರು, ಬೊಮ್ಮನಹಳ್ಳಿ ಮತ್ತು ತಿಳುವಳ್ಳಿ ಸರ್ಕಾರಿ ಕಾಲೇಜಿನ ಮೈದಾನವನ್ನು ಸಮತಟ್ಟು ಮಾಡಿ, ಕಾಂಪೌಂಡು ನಿರ್ಮಾಣ	ಶ್ರೀ ಸಿ.ಎಂ. ಉದಾಸಿ, ಮಾನ್ಯ ಶಾಸಕರು ಹಾಗೂ ಅಧ್ಯಕ್ಷರು, ಅಂದಾಜು ಸಮಿತಿ
43	ಹಾವೇರಿ	ಹಿರೇಕೆರೂರು	ದುರ್ಗಾದೇವಿ ದೇವಸ್ಥಾನದ ಬಳಿ ಕ್ರೀಡಾಂಗಣ ನಿರ್ಮಾಣ	ಶ್ರೀ ಬಿ.ಸಿ. ಪಾಟೀಲ್, ಮಾನ್ಯ ಕೃಷಿ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರು
44	ಹಾವೇರಿ	ಹಾನಗಲ್	ಹಿರೇಹುಲ್ಲಾಳ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಮೈದಾನ ಸಮತಟ್ಟು ಮತ್ತು ಕಾಂಪೌಂಡು ಗೋಡೆ ನಿರ್ಮಾಣ	ಶ್ರೀ ಸಿ.ಎಂ. ಉದಾಸಿ, ಮಾನ್ಯ ಶಾಸಕರು
45	ಚಿಕ್ಕಮಗಳೂರು	ಮೂಡಿಗೆರೆ	ಕಳಸ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ	ಶ್ರೀ ಎಸ್.ವಿ. ರಾಮಚಂದ್ರ, ಮಾನ್ಯ ಶಾಸಕರು & ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಳಸ
46	ಗದಗ	ಗದಗ	25 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹೊನಲು ಬೆಳಕಿನ ಕ್ರೀಡಾಂಗಣ ನಿರ್ಮಾಣ ತಲಾ ರೂ 5.00 ಲಕ್ಷಗಳ	ಶ್ರೀ ಎಚ್.ಕೆ.ಪಾಟೀಲ, ಮಾನ್ಯ ಶಾಸಕರು, ಗದಗ.
47	ಬಳ್ಳಾರಿ	ಕಂಪ್ಲಿ	ಒಳಾಂಗಣ ಕ್ರೀಡಾಂಗಣ ನಿರ್ಮಾಣ	ಶ್ರೀ ಜೆ.ಎನ್. ಗಣೇಶ, ಮಾನ್ಯ ಶಾಸಕರು, ಕಂಪ್ಲಿ
48	ಬಳ್ಳಾರಿ	ಕುರುಗೋಡು	ಒಳಾಂಗಣ ಕ್ರೀಡಾಂಗಣ ನಿರ್ಮಾಣ	ಶ್ರೀ ಜೆ.ಎನ್. ಗಣೇಶ, ಮಾನ್ಯ ಶಾಸಕರು, ಕಂಪ್ಲಿ
49	ರಾಮನಗರ	ಚನ್ನಪಟ್ಟಣ	ಕ್ರೀಡಾಂಗಣ ನಿರ್ಮಾಣ	ಶ್ರೀ. ಹೆಚ್.ಡಿ. ಕುಮಾರಸ್ವಾಮಿ, ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳು

.. .. .. 5)

50	ಉಡುಪಿ	ಬೈಂದೂರು	ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ	ಶ್ರೀ ಬಿ.ಎಸ್. ಯಡಿಯೂರಪ್ಪ, ಸನ್ಮಾನ್ಯ ಮುಖ್ಯಮಂತ್ರಿಗಳು,
51	ಉಡುಪಿ	ಉಡುಪಿ	ಕೋಟ ಗ್ರಾಮದಲ್ಲಿರುವ ವಿವೇಕ ಸಂಸ್ಥೆ ಕ್ರೀಡಾಂಗಣ ಅಭಿವೃದ್ಧಿಗಾಗಿ	ಮಾನ್ಯಶಾಸಕರು, ಉಡುಪಿ
52	ಉಡುಪಿ	ಉಡುಪಿ	ಸರ್ಕಾರಿ ಪದವಿ ಪೂರ್ವ ಕಾಲೇಜು, ಕರ್ಜೆ ಇಲ್ಲಿ ಕ್ರೀಡಾಂಗಣ ನಿರ್ಮಾಣ	ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಮಾನ್ಯ ಶಾಸಕರು.
53	ಉಡುಪಿ	ಕಾರ್ಕಳ	ಸಾಣೂರು ಮತ್ತು ಮುನಿಯಾಲು ಗ್ರಾಮದಲ್ಲಿ ಕಬ್ಬಡ್ಡಿ ಮತ್ತು ವಾಲಿಬಾಲ್ ಸ್ಟೇಟಿಯಂ ನಿರ್ಮಾಣ	ಶ್ರೀವಿ. ಸುನಿಲ್ ಕುಮಾರ್, ಮಾನ್ಯ ಶಾಸಕರು, ಕಾರ್ಕಳ
54	ಬೆಂಗಳೂರು	ದೊಡ್ಡಬಳ್ಳಾಪುರ	ಬೆಳವಂಗಲ ಮತ್ತು ಮದುರೆ ಹೋಬಳಿಗಳಿಗೆ ಕ್ರೀಡಾಂಗಣ ನಿರ್ಮಾಣ	ಶ್ರೀ ವೆಂಕಟರಮಣಯ್ಯ, ಮಾನ್ಯ ಶಾಸಕರು, ದೊಡ್ಡಬಳ್ಳಾಪುರ
55	ಬೆಂಗಳೂರು	ದೊಡ್ಡಬಳ್ಳಾಪುರ	ಭಗತ್ ಸಿಂಗ್ ತಾಲ್ಲೂಕು ಕ್ರೀಡಾಂಗಣದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ	ಶ್ರೀ ವೆಂಕಟರಮಣಯ್ಯ, ಮಾನ್ಯ ಶಾಸಕರು, ದೊಡ್ಡಬಳ್ಳಾಪುರ

ವೈಎಸ್‌ಡಿ 34 ಇಬಿಬಿ 2021

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	1697
ಸದಸ್ಯರ ಹೆಸರು	:	ಶ್ರೀ ಪರಮೇಶ್ವರ ನಾಯಕ್ ಪಿ.ಟಿ
ಉತ್ತರಿಸುವ ಸಚಿವರು	:	ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು
ಉತ್ತರಿಸಬೇಕಾದ ದಿನಾಂಕ	:	16.03.2021

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಸಂವಿಧಾನದ ಅನುಚ್ಛೇದ 371 ಜೆ ರನ್ವಯ ಸ್ಥಾಪಿಸಲಾದ ಹೈದರಾಬಾದ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯನ್ನು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಎಂದು ಮರುನಾಮಕರಣಗೊಳಿಸಿರುವ ಉದ್ದೇಶವೇನು; ಮರುನಾಮಕರಣದಿಂದ ಹೈದರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿಗೆ ಸಿಗುವ ವಿಶೇಷ ಸೌಲಭ್ಯಗಳೇನು;	'ಹೈದ್ರಾಬಾದ್-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ'ಯ ಹೆಸರನ್ನು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ' ಎಂದು ಮರುನಾಮಕರಣ ಮಾಡುವಂತೆ ಕೋರಿ, ಆ ಪ್ರದೇಶದ ಚುನಾಯಿತ ಪ್ರತಿನಿಧಿಗಳು, ಗಣ್ಯರು ಹಾಗೂ ಸಂಘ ಸಂಸ್ಥೆಗಳ ಕೋರಿಕೆಯನುಸಾರ ಹಾಗೂ "ಹೈದ್ರಾಬಾದ್-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ"ಯ ಹೆಸರಿನಲ್ಲಿನ "ಹೈದ್ರಾಬಾದ್ ಪದವು ಹಾಲಿ ಅಪ್ರಸ್ತುತವಾಗಿರುವ ಹಿನ್ನೆಲೆಯಲ್ಲಿ ಸದರಿ ಮಂಡಳಿಯ ಹೆಸರನ್ನು "ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ" ಎಂದು ಮರುನಾಮಕರಣವನ್ನು ದಿನಾಂಕ: 07.09.2019ರಂದು ಮಾಡಲಾಗಿರುತ್ತದೆ. ವಿಶೇಷ ಸೌಲಭ್ಯವನ್ನು ನೀಡಲು ಕಲ್ಯಾಣ ಕರ್ನಾಟಕವೆಂದು ಮರುನಾಮಕರಣ ಮಾಡಿರುವುದಿಲ್ಲ. ಕಲ್ಯಾಣ ಕರ್ನಾಟಕ-ವೆಂಬುದು ಕರ್ನಾಟಕದ ಅಸ್ಮಿತೆಯನ್ನು ಬಿಂಬಿಸುತ್ತದೆ. ಆದ್ದರಿಂದ ಹೈದರಾಬಾದ್ ಕರ್ನಾಟಕಕ್ಕೆ ಕಲ್ಯಾಣ ಕರ್ನಾಟಕವೆಂದು ಮರುನಾಮಕರಣ ಮಾಡಲಾಗಿದೆ.
ಆ)	ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿಗೆ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿದ ಅನುದಾನವೆಷ್ಟು; ಇದುವರೆವಿಗೂ ಬಿಡುಗಡೆಗೊಂಡ ಅನುದಾನವೆಷ್ಟು;	ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಪ್ರಸ್ತಕ ಸಾಲಿನ ಆಯವ್ಯದಲ್ಲಿ ರೂ.1131.86 ಕೋಟಿಗಳ ಅನುದಾನ ಹಂಚಿಕೆಯಾಗಿದ್ದು, ರೂ.1031.86 ಕೋಟಿಗಳ ಅನುದಾನವನ್ನು ಮಂಡಳಿಗೆ ಹಾಗೂ ರೂ.100.00 ಕೋಟಿಗಳನ್ನು ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘಕ್ಕೆ ಬಿಡುಗಡೆ ಮಾಡಲಾಗಿದೆ.

ಕ್ರ ಸಂ.	ಪ್ರಶ್ನೆ	ಉತ್ತರ
ಇ)	ಬಿಡುಗಡೆಯಾಗದಿದ್ದಲ್ಲಿ, ವಿಳಂಬಕ್ಕೆ ಕಾರಣಗಳೇನು;	ಅನುದಾನ ಬಿಡುಗಡೆಯಾಗಿರುತ್ತದೆ. ಯಾವುದೇ ವಿಳಂಬವಾಗಿರುವುದಿಲ್ಲ.
ಈ)	ಅನುದಾನ ಬಿಡುಗಡೆಗೆ ಸರ್ಕಾರ ಕೈಗೊಂಡ ಕ್ರಮಗಳೇನು?	–ಅನ್ವಯಿಸುವುದಿಲ್ಲ–

ಪಿಡಿಎಸ್ 24 ಹೆಚ್‌ಕೆಡಿ 2021

(ಡಾ॥ ನಾರಾಯಣಗೌಡ)
ಸಚಿವರು,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:	1688
ಮಾನ್ಯ ಸದಸ್ಯರ ಹೆಸರು	ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್ (ಗೌರಿಬಿದನೂರು)
ಉತ್ತರಿಸಬೇಕಾದ ದಿನಾಂಕ	16-03-2021
ಉತ್ತರಿಸಬೇಕಾದವರು	ಮಾನ್ಯ ಅಬಕಾರಿ ಸಚಿವರು

****

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಗೌರಿಬಿದನೂರು ತಾಲ್ಲೂಕಿನಲ್ಲಿ ತೊಂಡೆಬಾವಿ, ಇಡಗೂರು, ನಾಮಗೊಂಡ್ಲ, ವೆಂಕಟಾಪುರ ಗ್ರಾಮಗಳಲ್ಲಿ ಎಂ.ಎಸ್.ಐ.ಎಲ್ ಮದ್ಯ ಮಾರಾಟ ಮಳಿಗೆ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?	ಗೌರಿಬಿದನೂರು ತಾಲ್ಲೂಕಿನ ಇಡಗೂರು ಗ್ರಾಮದಲ್ಲಿ ಎಂ.ಎಸ್.ಐ.ಎಲ್ ಮದ್ಯ ಮಾರಾಟ ಮಳಿಗೆ ಸ್ಥಾಪಿಸಲು ದಿನಾಂಕ: 10-03-2021ರ ಅಬಕಾರಿ ಆಯುಕ್ತರ ಕಛೇರಿಯ ಆದೇಶದನ್ವಯ ಪೂರ್ವಾನುಮತಿ ನೀಡಲಾಗಿದೆ. ಗೌರಿಬಿದನೂರು ತಾಲ್ಲೂಕಿನ ತೊಂಡೆಬಾವಿ, ನಾಮಗೊಂಡ್ಲ ಮತ್ತು ವೆಂಕಟಾಪುರ ಗ್ರಾಮಗಳಲ್ಲಿ ಎಂ.ಎಸ್.ಐ.ಎಲ್ ಮದ್ಯ ಮಾರಾಟ ಮಳಿಗೆ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.
ಆ)	ಹಾಗಿದ್ದಲ್ಲಿ, ಅನುಮತಿ ನೀಡಲು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು:	ಎಂ.ಎಸ್.ಐ.ಎಲ್ ಸಂಸ್ಥೆಗೆ 2009ರಲ್ಲಿ ಮಂಜೂರಾಗಿದ್ದ 463 ಸಿಎಲ್-11ಸಿ ಸನ್ನದುಗಳ ಕೋಟಾದಡಿ ಚಿಕ್ಕಬಳ್ಳಾಪುರ ಜಿಲ್ಲೆಗೆ ಒಟ್ಟು 14 ಸನ್ನದುಗಳ ಕೋಟಾ ನಿಗದಿಪಡಿಸಲಾಗಿದೆ. ಇವುಗಳಲ್ಲಿ ಗೌರಿಬಿದನೂರು ವಿಧಾನ ಸಭಾ ಕ್ಷೇತ್ರಕ್ಕೆ 2 ಸಿಎಲ್-11ಸಿ ಸನ್ನದುಗಳು ನಿಗದಿಯಾಗಿದ್ದು, ಇವುಗಳಲ್ಲಿ ನಗರ ಪ್ರದೇಶಕ್ಕೆ ಒಂದು (ಬಿ.ಹೆಚ್. ರಸ್ತೆ, ಗೌರಿಬಿದನೂರು ನಗರ) ಹಾಗೂ ಗ್ರಾಮೀಣ ಪ್ರದೇಶಕ್ಕೆ ಒಂದು (ನರಸಾಪುರ ಗ್ರಾಮ)ಸಿಎಲ್-11ಸಿ ಸನ್ನದನ್ನು ಮಂಜೂರು ಮಾಡಲಾಗಿದೆ. ಎಂ.ಎಸ್.ಐ.ಎಲ್ ಸಂಸ್ಥೆಗೆ 2016ರಲ್ಲಿ ಮಂಜೂರಾಗಿದ್ದ 900 ಸಿಎಲ್-11ಸಿ ಸನ್ನದುಗಳ ಕೋಟಾದಡಿ ಚಿಕ್ಕಬಳ್ಳಾಪುರ ಜಿಲ್ಲೆಗೆ ಒಟ್ಟು 20 ಸನ್ನದುಗಳ ಕೋಟಾ ನಿಗದಿಪಡಿಸಲಾಗಿದೆ. ಇವುಗಳಲ್ಲಿ 15 ಸನ್ನದುಗಳಿಗೆ ಅನುಮತಿ ನೀಡಲಾಗಿದ್ದು, 5 ಸನ್ನದುಗಳು ಬಾಕಿ ಉಳಿದಿವೆ. ಗೌರಿಬಿದನೂರು ವಿಧಾನ ಸಭಾ ಕ್ಷೇತ್ರಕ್ಕೆ 4 ಸಿಎಲ್-11ಸಿ ಸನ್ನದುಗಳು ನಿಗದಿಯಾಗಿದ್ದು, ಇವುಗಳನ್ನು ಮೇಳ್ಯಾ, ತರಿದಾಳು, ಕಾಮಗಾನಹಳ್ಳಿ ಮತ್ತು ಇಡಗೂರು ಗ್ರಾಮಗಳಿಗೆ ಮಂಜೂರು ಮಾಡಲಾಗಿದೆ.
ಇ)	ಈ ಪ್ರಸ್ತಾವನೆಗಳಲ್ಲಿ ಮಂಜೂರಾತಿ ಅರ್ಹತೆಗೆ ಏನಾದರು ತೊಡಕುಗಳು ಇದೆಯೇ: ಇಲ್ಲವಾದಲ್ಲಿ ಈ ಕೂಡಲೇ ಅನುಮತಿ ನೀಡದಿರಲು ಕಾರಣಗಳೇನು? (ವಿವರ ನೀಡುವುದು)	ಉದ್ಭವಿಸುವುದಿಲ್ಲ:

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು

ಆಇ 19 ಇಲ್ ಕ್ಯೂ 2021

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2420
ಸದಸ್ಯರ ಹೆಸರು : ಶ್ರೀ ತಮ್ಮಣ್ಣ ಡಿ.ಸಿ. (ಮದ್ದೂರು)
ಉತ್ತರಿಸಬೇಕಾದ ದಿನಾಂಕ : 16.03.2021.

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	2019-20 ಹಾಗೂ 2020-21 ನೇ ಸಾಲಿನಲ್ಲಿ ಜಲಸಂಪನ್ಮೂಲ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ನೀರಾವರಿ ನಿಗಮಗಳಿಗೆ ನಿಗದಿಪಡಿಸಿರುವ ಅನುದಾನ ಎಷ್ಟು;	ಜಲಸಂಪನ್ಮೂಲ ಇಲಾಖೆಗೆ ಆಯವ್ಯಯದಲ್ಲಿ ಒದಗಿಸಲಾದ ಅನುದಾನವನ್ನು ನಿಗಮವಾರು ಹಂಚಿಕೆ ಮಾಡಲಾಗುತ್ತಿದ್ದು, 2019-20 ಹಾಗೂ 2020-21 ನೇ ಸಾಲಿನಲ್ಲಿ ನಿಗಮಗಳಿಗೆ ಹಂಚಿಕೆ ಮಾಡಲಾದ ಅನುದಾನದ ವಿವರಗಳು ಈ ಕೆಳಕಂಡಂತಿವೆ:
ಆ.	ಈ ಅನುದಾನದಡಿ ಈವರೆಗೆ ವೆಚ್ಚವಾಗಿರುವ ಅನುದಾನ ಎಷ್ಟು; ಬಿಡುಗಡೆ ಆಗಿರುವ ಅನುದಾನ ಎಷ್ಟು; (ನಿಗಮವಾರು ಹಾಗೂ ವಿಭಾಗವಾರು ಪ್ರತ್ಯೇಕವಾಗಿ ವಿವರ ನೀಡುವುದು)	(ರೂ. ಕೋಟಿಗಳಲ್ಲಿ) — ಕೆಳಗಿನ ಕೋಷ್ಟಕ ನೋಡಿ
ಇ.	ಯಾವ ಯಾವ ನಿಗಮಗಳ ವ್ಯಾಪ್ತಿಯಲ್ಲಿ ಯೋಜನೆಯ ಅಂದಾಜಿಗಿಂತ ವೆಚ್ಚ ಹೆಚ್ಚಾಗಿದೆ ಅಥವಾ ಕಡಿಮೆಯಾಗಿದೆ? (ಸದರಿ ಯೋಜನೆಗಳ ವಿವರ ನೀಡುವುದು)	ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

(ರೂ. ಕೋಟಿಗಳಲ್ಲಿ)

ಕ್ರ ಸಂ.	ನಿಗಮ	ಪರಿಷ್ಕೃತ ಆಯವ್ಯಯ ಅನುದಾನ	ಬಿಡುಗಡೆ	ವೆಚ್ಚ *
	2019-20			
1	ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ	4201.44	3961.82	4244.36
2	ಕರ್ನಾಟಕ ನೀರಾವರಿ ನಿಗಮ ನಿಯಮಿತ	5836.51	5621.70	6309.41
3	ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ	3373.52	3358.80	3388.65
4	ಕಾವೇರಿ ನೀರಾವರಿ ನಿಗಮ ನಿಯಮಿತ	3194.57	3073.60	3017.07
ಕ್ರ ಸಂ.	ನಿಗಮ	ಪರಿಷ್ಕೃತ ಆಯವ್ಯಯ ಅನುದಾನ	ಬಿಡುಗಡೆ ಫೆಬ್ರವರಿ 2021 ರ ಅಂತ್ಯಕ್ಕೆ	ವೆಚ್ಚ * ಫೆಬ್ರವರಿ 2021 ರ ಅಂತ್ಯಕ್ಕೆ
	2020-21			
1	ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ	6641.40	4544.50	5376.40
2	ಕರ್ನಾಟಕ ನೀರಾವರಿ ನಿಗಮ ನಿಯಮಿತ	5310.50	4427.13	4480.95
3	ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ	2491.51	2305.79	1962.79
4	ಕಾವೇರಿ ನೀರಾವರಿ ನಿಗಮ ನಿಯಮಿತ	2812.79	2247.83	1733.55

* ವೆಚ್ಚವು ಪ್ರಾರಂಭಿಕ ಮೊತ್ತವನ್ನು ಒಳಗೊಂಡಿರುತ್ತದೆ.

ಜಸಂಇ 56 ಎಂಎಲ್ಎ 2021

(ಬಿ.ಎಸ್. ಯಡಿಯೂರಪ್ಪ)
ಮುಖ್ಯ ಮಂತ್ರಿ

ವಿಧಾನ ಸಭೆ ಸದಸ್ಯರಾದ ಮಾನ್ಯ ಶ್ರೀ ತಮ್ಮಣ್ಣ ಡಿ.ಸಿ. (ಮದ್ದೂರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂ: 2420 ಕ್ಕೆ

ಅನುಬಂಧ

(ರೂ ಕೋಟಿಗಳಲ್ಲಿ)

ಕ್ರ ಸಂ	ಯೋಜನೆಗಳು	ಇತ್ತೀಚಿನ ಅಂದಾಜು ಮೊತ್ತ	ದಿ:1.3.2021 ರಲ್ಲಿದ್ದಂತೆ ವೆಚ್ಚ (Cumulative)
	ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ		
1	ಕೃ.ಮೇ.ಯೋ. ಹಂತ -3 (ಕಾಮಗಾರಿಗಳು & ಭೂಸ್ವಾಧೀನ, ಪು & ಪು)	51148.94	12272.43
2	ರಾಮಥಾಳ (ಮರೋಳ) ಏತ ನೀರಾವರಿ ಯೋಜನೆ	1100.00	1056.17
3	ಸನ್ನತಿ ಏತ ನೀರಾವರಿ ಯೋಜನೆ	673.90	331.69
4	ಬೂದಿಹಾಳ-ಪೀರಾಪೂರ ಏತ ನೀರಾವರಿ ಯೋಜನೆ	840.00	414.74
5	ನಂದವಾಡಗಿ ಏತ ನೀರಾವರಿ ಯೋಜನೆ	1530.00	718.03
6	ನಾ.ಬ.ದಂ.ಕಾ. ವಿತರಣಾ ಕಾಲುವೆ - ೯ಎ	275.00	271.11
7	ಬೀದರ ಜಿಲ್ಲೆ ಮಾಂಜ್ರಾ ನದಿಗೆ ಅಡ್ಡಲಾಗಿ 4 ಸರಣಿ ಬ್ಯಾರೇಜುಗಳ ನಿರ್ಮಾಣ	300.00	288.56
8	ಮಲಪ್ರಭಾ ನದಿಗೆ ಅಡ್ಡಲಾಗಿ ಅಡವಿಹಾಳ-ಕೂಡಲಸಂಗಮ ಸೇತುವೆ ನಿರ್ಮಾಣ	59.80	30.24
9	ಭೀಮಾ ನದಿಗೆ ಅಡ್ಡಲಾಗಿ 4 ಬ್ಯಾರೇಜುಗಳಿಗೆ ವರ್ಟಿಕಲ್ ಗೇಟುಗಳ ಅಳವಡಿಕೆ	197.00	177.44
10	ಕೋರ್ತಿ-ಕೊಲ್ಹಾರ್ ಸೇತುವೆ ಪುನಃಶ್ಚೇತನ	31.00	7.23
11	ನಾರಾಯಣಪೂರ ಎಡದಂಡೆ ಕಾಲುವೆ ಜಾಲದ ಆಧುನೀಕರಣ (ಎನ್.ಎಲ್.ಬಿ.ಸಿ.-ಇ.ಆರ್.ಎಂ.) - ಎ.ಐ.ಬಿ.ಪಿ. ಯೋಜನೆ	4699.00	3901.62
12	ಆಲಮಟ್ಟಿ ಎಡದಂಡೆ ಕಾಲುವೆ ಆಧುನೀಕರಣ ಯೋಜನೆ	112.43	62.07
13	ನಾರಾಯಣಪೂರ ಬಲದಂಡೆ ಕಾಲುವೆ ಕಿ.ಮೀ.೦.೦೦ ರಿಂದ ೯೫.೦೦ ವರೆಗಿನ ಆಧುನೀಕರಣ ಯೋಜನೆ	825.00	713.44
14	ಯಾದಗಿರ್ ಜಿಲ್ಲೆಯಡಿ ಯರಗೋಳ & ಇತರೆ ಕೆರೆ ತುಂಬುವ ಯೋಜನೆ ಮತ್ತು ರಸ್ತೆ ಕಾಮಗಾರಿಗಳು	45.44	36.65
15	ಭೀಮಾ ನದಿಯಿಂದ ನೀರನ್ನು ಎತ್ತಿ ಯಾದಗಿರಿ ಜಿಲ್ಲೆಯ ೩೬ ಕೆರೆ ತುಂಬುವ ಯೋಜನೆ	320.00	250.88
16	ನಾಗರಬೆಟ್ಟ ಏತ ನೀರಾವರಿ ಯೋಜನೆ	170.70	42.02
17	ಹೆರಕಲ್ ದಕ್ಷಿಣ ಏತ ನೀರಾವರಿ ಯೋಜನೆ-ವಿಸ್ತರಣೆ	238.00	21.32
18	ಯಳ್ಳಿಗುತ್ತಿ ಏತ ನೀರಾವರಿ ಯೋಜನೆ	35.00	12.02
19	ಚಡಚಣ ಏತ ನೀರಾವರಿ ಯೋಜನೆ	413.20	263.84
	ಕರ್ನಾಟಕ ನೀರಾವರಿ ನಿಗಮ		
1	ಘಟಪ್ರಭಾ ಆಧುನೀಕರಣ	573.13	457.05

(ರೂ ಕೋಟಿಗಳಲ್ಲಿ)

ಕ್ರ ಸಂ	ಯೋಜನೆಗಳು	ಇತ್ತೀಚಿನ ಅಂದಾಜು ಮೊತ್ತ	ದಿ:1.3.2021 ರಲ್ಲಿದ್ದಂತೆ ವೆಚ್ಚ (Cumulative)
2	ಮುರುಗೋಡು ಏನೀಯೋ	22.53	19.09
3	ಚಚಡಿ ಏನೀಯೋ	51.00	5.88
4	ದೂದಗಂಗಾ	309.80	267.82
5	ಬಳ್ಳಾರಿ ನಾಲಾ	635.35	213.20
6	ಕಿಣಯೇ	79.00	85.09
7	ಶ್ರೀ ವೀರಭದ್ರೇಶ್ವರ ಏನೀಯೋ	544.00	187.79
8	ಬಸವೇಶ್ವರ (ಕೆಂಪವಾಡ) ಏನೀಯೋ	1319.27	809.12
9	ತುಬಚಿ-ಬಬಲೇಶ್ವರ ಏನೀಯೋ	3572.00	2374.09
10	ವೆಂಕಟೇಶ್ವರ ಏನೀಯೋ	174.42	61.99
11	ರಾಯಬಾಗ 10 ಗ್ರಾಮಗಳಲ್ಲಿ 17 ಕೆರೆಗಳನ್ನು ತುಂಬಿಸುವ ಯೋಜನೆ	91.40	84.38
12	ಕಿತ್ತೂರು ಕೆರೆ ತುಂಬಿಸುವ ಯೋಜನೆ	248.20	0.00
13	ಕುಲಹಳ್ಳಿ ಹೊನ್ನೂರು ಏನೀಯೋ	73.75	10.91
14	ಸಾಲಾಪುರ ಏನೀಯೋ	566.00	71.66
15	ಗೊಡಚಿನಮಲ್ಕಿ ಏನೀಯೋ	107.16	37.87
16	ರಾಯಬಾಗ ತಾಲ್ಲೂಕಿನ ಕುಡಚಿ ಕ್ಷೇತ್ರದ 10 [illegible]	34.38	97.09
17	ಸುಲ್ತಾನಪುರ ಬ್ರಿಡ್ಜ್ ಕಂ ಬ್ಯಾರೇಜ್	20.46	0.00
18	ಗಲಗಲಿ ಬ್ಯಾರೇಜ್	32.00	28.48
19	ಮಲಪ್ರಭಾ ಆಧುನೀಕರಣ	2120.00	1028.41
20	ಶಿಗ್ಗಾಂವ್ ಏನೀಯೋ	532.00	363.27
21	ಕಳಸನಾಲಾ ತಿರುವು ಯೋಜನೆ	885.80	273.33
22	ಬಂಡೂರು ನಾಲಾ ತಿರುವು ಯೋಜನೆ	791.50	0.57
23	ಸವಣೂರು ಏನೀಯೋ	690.00	203.02
24	ಸಿದ್ದನಬಾವಿ ಕೆರೆ ತುಂಬಿಸುವ ಯೋಜನೆ	12.57	10.76
25	ತುಪ್ಪರಿಹಳ್ಳ ಏನೀಯೋ	22.50	8.38
26	ಹಳಿಯಾಳ ಏನೀಯೋ	220.35	79.39
27	ಬೇಡ್ತಿ ಏನೀಯೋ	125.00	29.57
28	ಮುಂಡಗೋಡು ಕೆರೆ ತುಂಬಿಸುವ ಯೋಜನೆ (ಹಂತ-1)	144.55	66.99
29	ಬಾಗೇವಾಡಿ ಕೆರೆ ತುಂಬಿಸುವ ಯೋಜನೆ	379.92	27.07
30	ಮುಂಡಗೋಡು ತಾಲ್ಲೂಕಿನ 5 ಗ್ರಾಮ ಪಂಚಾಯಿತಿಗಳಲ್ಲಿ 84 ಕೆರೆಗಳನ್ನು ತುಂಬಿಸುವ ಯೋಜನೆ (ಹಂತ-2)	225.00	0.00
31	ಹಿಂಗರಗಿ ಕೆರೆ ತುಂಬಿಸುವ ಯೋಜನೆ	143.35	0.00
32	ತುಂಗಾ ಮೇಲ್ದಂಡೆ ಯೋಜನೆ	3395.02	3069.42
33	ದಂಡಾವತಿ	272.00	91.63
34	ಗೋಂಧಿ ಆಧುನೀಕರಣ ಯೋಜನೆ	128.95	193.58
35	ತುಂಗಾ ಆಧುನೀಕರಣ ಯೋಜನೆ	309.00	239.78

(ರೂ ಕೋಟಿಗಳಲ್ಲಿ)

ಕ್ರ ಸಂ	ಯೋಜನೆಗಳು	ಇತ್ತೀಚಿನ ಅಂದಾಜು ಮೊತ್ತ	ದಿ:1.3.2021 ರಲ್ಲಿದ್ದಂತೆ ವೆಚ್ಚ (Cumulative)
36	ಕಚವಿ ಕೆರೆ ತುಂಬಿಸುವ ಯೋಜನೆ	16.50	5.30
37	ವಾರಾಹಿ	1789.50	912.48
38	ಸಾಸ್ವೇಹಳ್ಳಿ ಕೆರೆ ತುಂಬಿಸುವ ಯೋಜನೆ	441.60	251.14
39	ಹರಪನಹಳ್ಳಿ ತಾಲ್ಲೂಕಿನ 60 ಕೆರೆಗಳನ್ನು ತುಂಬಿಸುವ ಯೋಜನೆ	227.00	81.21
40	ರಾಣೆಬೆನ್ನೂರು ದೊಡ್ಡಕೆರೆ ಮತ್ತು ಇತರೇ 3 ಕೆರೆಗಳನ್ನು ತುಂಬಿಸುವ ಯೋಜನೆ	32.50	25.04
41	ಗುಡ್ಡದಮಾದಾಪುರ ಕೆರೆ ತುಂಬಿಸುವ ಯೋಜನೆ	23.00	18.86
42	ಹಿರೇಕೆರೂರು ಪಟ್ಟಣದ ದುರ್ಗಾದೇವಿ ಮತ್ತು ಬಹುಗ್ರಾಮ ಕೆರೆಗಳನ್ನು ತುಂಬಿಸುವ ಯೋಜನೆ	24.00	17.13
43	ಹಾವೇರಿ ಜಿಲ್ಲೆಯ ಅಸುಂಡಿ ಕೆರೆ ಮತ್ತು ಇತರೇ 17 ಸಣ್ಣ ನೀರಾವರಿ ಕೆರೆಗಳನ್ನು ತುಂಬಿಸುವ ಯೋಜನೆ	91.50	60.80
44	ಬನವಾಸಿ ಕೆರೆ ತುಂಬಿಸುವ ಯೋಜನೆ	62.58	0.00
45	ಮಡ್ಲೂರು ಕೆರೆ ತುಂಬಿಸುವ ಯೋಜನೆ	38.00	15.04
46	ಉಡುಗಣಿ-ತಾಳಗುಂದ-ಹೂಸೂರು ಕೆರೆ ತುಂಬಿಸುವ ಯೋಜನೆ	850.00	0.00
47	ಮೂಡಿ ಕೆರೆ ತುಂಬಿಸುವ ಯೋಜನೆ	285.00	123.60
48	ಮೂಗೂರು ಕೆರೆ ತುಂಬಿಸುವ ಯೋಜನೆ	105.00	55.37
49	ಹೊಸಹಳ್ಳಿ ಕೆರೆ ತುಂಬಿಸುವ ಯೋಜನೆ	250.00	104.61
50	ಭರಮಸಾಗರ ಕೆರೆ ತುಂಬಿಸುವ ಯೋಜನೆ	522.11	190.56
51	ಜಗಳೂರು ಕೆರೆ ತುಂಬಿಸುವ ಯೋಜನೆ	660.00	180.22
52	ಬಾಳಂಬೀಡು ಕೆರೆ ತುಂಬಿಸುವ ಯೋಜನೆ	386.55	45.73
53	ಆಣೂರು ಕೆರೆ ತುಂಬಿಸುವ ಯೋಜನೆ	212.00	108.25
54	ಬುಡಪನಹಳ್ಳಿ ಕೆರೆ ತುಂಬಿಸುವ ಯೋಜನೆ	157.00	125.43
55	ಹಿರೇಕೌಂಶಿ ಕೆರೆ ತುಂಬಿಸುವ ಯೋಜನೆ	117.55	20.25
56	ಸೌಕೂರು ಏನೀಯೋ	73.71	19.09
57	ಎಣ್ಣೆಹೊಳೆ ಏನೀಯೋ	108.00	31.07
58	ಸರ್ವಜ್ಞ ಕೆರೆ ತುಂಬಿಸುವ ಯೋಜನೆ	185.00	0.31
59	ಕಸಬ (ಕಲ್ಲುವಡ್ಡಹಳ್ಳ) ಏನೀಯೋ	125.17	0.00
60	ಬೆಣ್ಣೆತೋರಾ ಆಧುನೀಕರಣ	600.24	750.60
61	ಅಮರ್ಜ ಯೋಜನೆ	280.00	347.25
62	ಭೀಮಾ ಏನೀಯೋ	964.00	914.48
63	ಕಾರಂಜ	725.00	747.76
64	ಕಾರಂಜ ಆಧುನೀಕರಣ	538.39	391.80
65	ಗಂಡೋರಿನಾಲಾ ಆಧುನೀಕರಣ	92.00	89.24

(ರೂ ಕೋಟಿಗಳಲ್ಲಿ)

ಕ್ರ ಸಂ	ಯೋಜನೆಗಳು	ಇತ್ತೀಚಿನ ಅಂದಾಜು ಮೊತ್ತ	ದಿ:1.3.2021 ರಲ್ಲಿದ್ದಂತೆ ವೆಚ್ಚ (Cumulative)
66	ಮೇಲ್ದಂಡೆ ಮುಲ್ಲಾಮಾರಿ ಆಧುನೀಕರಣ	68.60	45.86
67	ಆರ್&ಆರ್ ಪ್ಯಾಕೇಜ್‌ಗಳನ್ನು ಒಳಗೊಂಡಂತೆ ಕೆಳದಂಡೆ ಮುಲ್ಲಾಮಾರಿ ಆಧುನೀಕರಣ	124.76	77.63
68	ಕೊಂಗಳ ಬ್ಯಾರೇಜ್‌ನಿಂದ ಚುಲ್ಕಿನಾಲಾ ಜಲಾಶಯ ಮತ್ತು ಕೆರೆಗಳನ್ನು ತುಂಬಿಸುವ ಯೋಜನೆ	341.91	180.13
69	ಮಾಣಿಕೇಶ್ವರ ಮತ್ತು ಹಾಲಹಳ್ಳ ಬ್ಯಾರೇಜ್‌ನಿಂದ ನೀರು ಒದಗಿಸುವ ಮೂಲಕ ಕಾರಂಜ ಯೋಜನೆ ಅಚ್ಚುಕಟ್ಟನ್ನು ಸ್ಥಿರಗೊಳಿಸುವುದು.	126.85	0.00
70	ಭೀಮಾ ನದಿಯ ಹೆಚ್ಚುವರಿ ನೀರನ್ನು ಅಮರ್ಜಾ ಜಲಾಶಯಕ್ಕೆ ತುಂಬಿಸುವ ಯೋಜನೆ	450.00	147.78
71	ಸಿಂಗಟಾಲೂರು ಏನೀಯೋ	5768.04	2857.70
72	ತುಂಗಭದ್ರಾ ಕಾಲುವೆ ಆಧುನೀಕರಣ	3161.35	2603.41
73	ವಿಜಯನಗರ ಕಾಲುವೆ ಆಧುನೀಕರಣ	456.63	86.40
74	ಅಳವಂಡಿ-ಬೆಟಗೇರಿ ಏನೀಯೋ	87.10	73.79
75	ಶಿರಹಟ್ಟಿ ತಾಲ್ಲೂಕಿನ ಇಟಗಿ ಗ್ರಾಮದ ಬಳಿ ಕೆರೆಗಳನ್ನು ತುಂಬಿಸುವುದು ಮತ್ತು ಕುಡಿಯುವ ನೀರನ್ನು ಒದಗಿಸುವುದು	140.00	0.00
76	ಹಗರಿಬೊಮ್ಮನಹಳ್ಳ ಯೋಜನೆಯಡಿ ತುಂಗಭದ್ರಾ ನದಿಯಿಂದ ಮಾಲವಿ ಜಲಾಶಯಕ್ಕೆ ನೀರನ್ನು ತುಂಬಿಸುವ ಯೋಜನೆ	144.95	98.98
77	ಬಹುದ್ದೂರ್ ಬಂಡಿ ಏನೀಯೋ	80.00	22.13
78	ತಿಮ್ಮಾಪುರ ಏನೀಯೋ	92.00	58.48
79	ದೇವಲಾಪುರ ಮತ್ತು ಇತರ ಕೆರೆಗಳು	50.91	85.09
80	ಹೊಸಪೇಟೆ (ಪಾಪಿನಾಯಕನಹಳ್ಳಿ) ಕೆರೆ ತುಂಬಿಸುವ ಯೋಜನೆ	243.35	0.00
81	ಗಣೆಕಲ್ ಜಲಾಶಯವನ್ನು ತುಂಬಿಸುವ ಯೋಜನೆ	189.22	0.00
82	ಸುಗ್ನಳ್ಳಿ ಆಲದಮ್ಮನ ಕೆರೆ ತುಂಬಿಸುವ ಯೋಜನೆ	10.00	0.00
	ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ		
1	ಭದ್ರಾ ಮೇಲ್ದಂಡೆ ಯೋಜನೆ	21473.67	4247.33
2	ಎತ್ತಿನಹೊಳೆ ಯೋಜನೆ	24785.00	7796.32
	ಕಾವೇರಿ ನೀರಾವರಿ ನಿಗಮ ನಿಯಮಿತ		

(ರೂ ಕೋಟಿಗಳಲ್ಲಿ)

ಕ್ರ ಸಂ	ಯೋಜನೆಗಳು	ಇತ್ತೀಚಿನ ಅಂದಾಜು ಮೊತ್ತ	ದಿ:1.3.2021 ರಲ್ಲಿದ್ದಂತೆ ವೆಚ್ಚ (Cumulative)
1	ಯಗಚಿ ಯೋಜನೆಯಡಿಯಲ್ಲಿ ಬರುವ ಕಾಮಸಮುದ್ರ ಬ್ರಾಂಚ್ ಕೆನಾಲ್ – ಸರಪಳಿ 5 ರಿಂದ 35 ಕಿ.ಮೀ. ವರೆಗಿನ ನಾಲಾ ಕಾಮಗಾರಿ	81.00	69.48
2	ಕಾಚೇನಹಳ್ಳಿ ಏತ ನೀರಾವರಿ ಯೋಜನೆಯ 3ನೇ ಹಂತ	141.50	0.36
3	ಚಿಕ್ಕಮಗಳೂರು ತಾಲ್ಲೂಕಿನ ಮಳಲೂರು ಏತ ನೀರಾವರಿ ಯೊಜನೆಯಡಿಯಲ್ಲಿ 599 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಯೋಜನೆ	5.95	4.08
4	ಹೊಳೇನರಸೀಪುರ ತಾಲ್ಲೂಕು, ಕಟಬೆಳಗುಳ ಸಮೀಪ ಹೇಮಾವತಿ ನದಿಗೆ ಅಡ್ಡಲಾಗಿ ಕಟ್ಟಿರುವ ಶ್ರೀರಾಮದೇವರ ಅಣೆಕಟ್ಟೆಯ ಪುನರ್ ನಿರ್ಮಾಣ ಹಾಗೂ ಇನ್ನಿತರೆ ಅಭಿವೃದ್ಧಿ ಕಾಮಗಾರಿಗಳು	122.00	84.33
5	ರಾಮನಗರ ತಾಲ್ಲೂಕು ಕೈಲಾಂಚ ಹೋಬಳ ಹಾಗೂ ಕನಕಪುರ ತಾಲ್ಲೂಕು ಕಸಬಾ ಹೋಬಳ ಮತ್ತು ಸಾತನೂರು ಹೋಬಳಿಯ 27 ಕೆರೆಗಳನ್ನು ತುಂಬಿಸುವ ಯೋಜನೆ	155.00	127.99
6	ಪಿರಿಯಾಪಟ್ಟಣ ತಾಲ್ಲೂಕಿನ ಮುತ್ತಿನಮುಳುಸೂಗೆ ಗ್ರಾಮದ ಬಳ ಕಾವೇರಿ ನದಿಯಿಂದ ನೀರನ್ನು ಎತ್ತಿ 79 ಗ್ರಾಮಗಳಲ್ಲಿ ಬರುವ 133 ಕೆರೆಗಳಗೆ ಮತ್ತು 17 ಕಟ್ಟೆಗಳಗೆ ಕುಡಿಯುವ ನೀರಿಗಾಗಿ ನೀರು ತುಂಬಿಸುವ ಯೋಜನೆ ಮತ್ತಿನ ಸೋಗೆ ಯೋಜನೆ)	295.00	126.21
7	ನಂಜನಗೂಡು ತಾಲ್ಲೂಕಿನ ಹುರ ಹಾಗೂ 25 ಕೆರೆಗಳಗೆ ನೀರು ತುಂಬಿಸುವ ಯೋಜನೆ	45.00	26.22
8	ಚಾಮರಾಜನಗರ ಹಾಗೂ ನಂಜನಗೂಡು ತಾಲ್ಲೂಕಿನ 24 ಕೆರೆಗೆಳಗೆ ನೀರು (ಸುತ್ತೂರು) ತುಂಬಿಸುವ ಯೋಜನೆ	233.00	157.96
9	ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಶ್ರೀನಿವಾಸನಹಳ್ಳಿ, ನಾರಾಯಣಪುರ ಕೆರೆಳಾಲುಸಂದ್ರ ಮತ್ತು ಇತರೆ ಕೆರೆಗಳಗೆ ಟಿ.ಬೇಕುಪ್ಪೆ ಗ್ರಾ ಮದ ಬಳ ಅರ್ಕಾವತಿ ನದಿಯಿಂದ ಕುಡಿಯುವ ನೀರಿಗಾಗಿ ನೀರು ತುಂಬಿಸುವ ಯೋಜನೆ	27.00	13.69
10	ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕಿನ ಗರಳಾಪುರ ಮತ್ತು ಇತರೆ 12 ಕೆರೆಗಳಗೆ ಅರ್ಕಾವತಿ ನದಿಯಿಂದ ಕೂತಗಳ ಗ್ರಾಮದ ಹತ್ತಿರ ನೀರನ್ನು ಎತ್ತಿ ಕುಡಿಯುವ ನೀರಿಗಾಗಿ ನೀರು ತುಂಬಿಸುವ ಯೋಜನೆ	70.00	45.63

(ರೂ ಕೋಟಿಗಳಲ್ಲಿ)

ಕ್ರ ಸಂ	ಯೋಜನೆಗಳು	ಇತ್ತೀಚಿನ ಅಂದಾಜು ಮೊತ್ತ	ದಿ:1.3.2021 ರಲ್ಲಿದ್ದಂತೆ ವೆಚ್ಚ (Cumulative)
11	ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಕಸಬಾ ಹೋಬಳಿಯಲ್ಲಿ ಬರುವ 6 ಸಂಖ್ಯೆ ಕುಂಠಿತ ಏತ ನೀರಾವರಿ ಯೋಜನೆಗಳ ಅಚ್ಚುಕಟ್ಟುಗಳಿಗೆ ಪುನಶ್ಚೇತನ ಮತ್ತು 16 ಕೆರೆಗಳಿಗೆ ಇಗ್ಗಲೂರು ಬ್ಯಾರೇಜ್‌ನಿಂಧ ಬನ್ನಹಳ್ಳಿ ಹತ್ತಿರ ಏತ ನೀರಾವರಿ ಮೂಲಕ ನೀರು ತುಂಬಿಸುವ ಯೋಜನೆ.	77.00	22.99
12	ಪಾಂಡವಪುರ ತಾಲ್ಲೂಕಿನ ಅಸ್ಥಿತ್ವದಲ್ಲಿರುವ ಮಲ್ಲಿಗೆರೆ	22.00	2.55
13	ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ನ	129.00	31.20
14	ಸೋಮವಾರಪೇಟೆ ತಾಲ್ಲೂಕಿನ ಕಟ್ಟೇಪುರ ಗ್ರಾಮದ ಬ	120.00	50.06
15	ದೊಡ್ಡಬೆಲೆ ತ್ಯಾಜ್ಯ ನೀರು ಶುದ್ದೀಕರಣ ಘಟಕದ ಹತ್ತಿರದಿಂದ ರಾಮನಗರ ತಾಲ್ಲೂಕಿನ ಬಿಡದಿ ಹೋಬಳಿ ಹಾಗೂ ಕನಕಪುರ ತಾಲ್ಲೂಕಿನ ಹಾರೋಹಳ್ಳಿ ಹೋಬಳಿಯ ಕೆರೆಗಳಿಗೆ ನೀರು ತುಂಬಿಸುವ ಯೋಜನೆ	146.00	13.46
16	ರಾಮನಗರ ಜಿಲ್ಲೆ, ಚನ್ನಪಟ್ಟಣ, ರಾಮನಗರ, ಮಾಗಡಿ ಮತ್ತು ಕನಕಪುರ ತಾಲೂಕುಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು ಸತ್ಯಗಾಲದ ಸಮೀಪದಲ್ಲಿ ಕಾವೇರಿ ನದಿಯಿಂದ ಇಗ್ಗಲೂರು ಹತ್ತಿರದ ಹೆಚ್.ಡಿ.ದೇವೇಗೌಡ ಬ್ಯಾರೇಜ್‌ಗೆ ಗುರುತ್ವಾಕರ್ಷಣೆ ಮೂಲಕ ನೀರು ಹರಿಸುವ ಯೋಜನೆ	540	182.20
17	ಮೈಸೂರು ಜಿಲ್ಲೆ ಕೆ.ಆರ್. ನಗರ ತಾಲ್ಲೂಕಿನ ಹಾಡ್ಯ ಗ್ರಾಮದ ಬಳಿ ಕಾವೇರಿ ನದಿಯಿಂದ ಲಿಫ್ಟ್ ಮುಖೇನ ನೀರನ್ನು ಎತ್ತಿ ಕೆ.ಆರ್.ನಗರ ತಾಲ್ಲೂಕಿನ 12 ಕೆರೆಗಳಿಗೆ ಕುಡಿಯುವ ನೀರಿಗಾಗಿ ನೀರು ತುಂಬಿಸುವ ಯೋಜನೆ	15.00	0.00
18	ಕಬಿನಿ ನದಿಯಿಂದ ಹೆಚ್.ಡಿ.ಕೋಟೆ ತಾಲ್ಲೂಕಿನ ಇಬ್ಬಜಾಲ ಗ್ರಾಮದ ಬಳಿ ಕಬಿನಿ ನದಿಯಿಂದ ನೀರನ್ನು ಎತ್ತಿ ಕುಡಿಯುವ ನೀರನ್ನು ಒದಗಿಸುವ ಸಲುವಾಗಿ 39 ಕೆರೆಗಳಿಗೆ ನೀರನ್ನು ತುಂಬಿಸುವ ಯೋಜನೆಯ	68.00	44.68
19	ಮದ್ದೂರು ತಾಲ್ಲೂಕು ತಗ್ಗಹಳ್ಳಿ ಅಣೆಕಟ್ಟಿನ ಹಿನ್ನೀರನ್ನು	45.00	0.00
20	ಚನ್ನರಾಯಪಟ್ಟಣ ತಾಲ್ಲೂಕಿನ ನುಗ್ಗೇಹಳ್ಳಿ ಕುಡಿಯುವ ನೀರಿನ ಯೋಜನೆ	17.60	15.72

(ರೂ ಕೋಟಿಗಳಲ್ಲಿ)

ಕ್ರ ಸಂ	ಯೋಜನೆಗಳು	ಇತ್ತೀಚಿನ ಅಂದಾಜು ಮೊತ್ತ	ದಿ:1.3.2021 ರಲ್ಲಿದ್ದಂತೆ ವೆಚ್ಚ (Cumulative)
21	ಜನಿವಾರ ಕೆರೆಯಿಂದ ನೀರನ್ನು ಎತ್ತಿ ಶವಣಬೆಳಗೊಳ – ಹಿರಿಸಾವೆ ಹೋಬಳಿ ಮತ್ತು ಕೆ.ಆರ್.ಪೇಟೆ ತಾಲ್ಲೂಕಿನ ಸಂತೇಬಾಚನಹಳ್ಳಿ ಹೋಬಳಿಯಲ್ಲಿನ ಕೆರೆಗಳನ್ನು ತುಂಬಿಸುವ ಯೋಜನೆ	56.00	52.63
22	ಚನ್ನರಾಯಪಟ್ಟಣ ಅಮಾನಿಕೆರೆಯಿಂದ ಲಿಫ್ಟ್ ಮುಖೇನ ನೀರನ್ನು ಎತ್ತಿ ಚನ್ನರಾಯಪಟ್ಟಣ ತಾಲ್ಲೂಕಿನ 25 ಕೆರೆಗಳನ್ನು ಕುಡಿಯುವ ನೀರಿಗಾಗಿ ನೀರು ತುಂಬಿಸುವ ಯೋಜನೆ	70.00	19.92
23	ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು ಕಸಬಾ ಹೋಬಳಿ ಗೊಲ್ಲರಹೊಸಹಳ್ಳಿ ಗ್ರಾಮದ ವ್ಯಾಪ್ತಿಯ ಹೇಮಾವತಿ ಎಡದಂಡೆ ನಾಲೆಯಿಂದ ಗೊಲ್ಲರಹೊಸಹಳ್ಳಿ ಮತ್ತು ಕುರುವಂಕ ಕೆರೆಗಳಿಗೆ ಕುಡಿಯುವ ನೀರಿಗಾಗಿ ನೀರನ್ನು ತುಂಬಿಸುವ ಯೋಜನೆಯ	0.90	0.09
24	ಹಾಸನ ಜಿಲ್ಲೆ ಹೊಳೆನರಸೀಪುರ ತಾಲ್ಲೂಕಿನ ರಂಗೇನಹಳ್ಳಿ ಮತ್ತು ಇತರೆ 22 ಕೆರೆಗಳಿಗೆ ಕುಡಿಯುವ ನೀರಿಗಾಗಿ ನೀರು ತುಂಬಿಸುವ ಯೋಜನೆ ರಂಗೇನಹಳ್ಳಿ ಏತ ನೀರಾವರಿ ಯೋಜನೆ	46.50	19.70
25	(a)ಆನೆಕೆರೆ ಶಂಭುದೇವರ ಕೆರೆಯಿಂದ ನೀರನ್ನು ಎತ್ತಿ ಚನ್ನರಾಯಪಟ್ಟಣ ತಾಲ್ಲೂಕು ದಂಡಿಗನ ಹೋಬಳಿಯ ಆಲಗೊಂಡನಹಳ್ಳಿ ಏತ ನೀರಾವರಿ ಯೋಜನೆಯ ಅಡಿಯಲ್ಲಿ ಬರುವ 300 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಹಾಗೂ ಚನ್ನರಾಯಪಟ್ಟಣ ತಾಲ್ಲೂಕು ದಂಡಿಗನಹಳ್ಳಿ ಹೋಬಳಿ ವ್ಯಾಪ್ತಿಯ 26 ಕೆರೆಗಳನ್ನು ಕುಡಿಯುವ ನೀರಿಗಾಗಿ ತುಂಬಿಸುವ ಯೋಜನೆ.	47.00	44.51
26	(b)ಹೇಮಾವತಿ ನದಿಯಿಂದ ನೀರನ್ನು ಎತ್ತಿ ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ಆನೆಕೆರೆ ಶಂಭುದೇವರ ಕೆರೆ ತುಂಬಿಸುವ ಯೋಜನೆ	26.00	4.00
27	ಹೊಳೆನರಸೀಪುರ ತಾಲ್ಲೂಕು ಮಾವಿನಕೆರೆ ಗ್ರಾಮದ ಹತ್ತಿರ ಹೇಮಾವತಿ ನದಿಯಿಂದ ನೀರನ್ನು ಎತ್ತಿ ಹಾಸನ ತಾಲ್ಲೂಕಿನ ದುದ್ದ ಹಾಗೂ ಶಾಂತಿ ಗ್ರಾಮ ಹೋಬಳಿಗಳ 160 ಕೆರೆಗಳು ಹಾಗೂ 10 ಕಟ್ಟೆಗಳಿಗೆ ಕುಡಿಯುವ ನೀರಿಗಾಗಿ ನೀರನ್ನು ಹರಿಸುವ ಯೋಜನೆ	333	82.00

(ರೂ ಕೋಟಿಗಳಲ್ಲಿ)

ಕ್ರ ಸಂ	ಯೋಜನೆಗಳು	ಇತ್ತೀಚಿನ ಅಂದಾಜು ಮೊತ್ತ	ದಿ:1.3.2021 ರಲ್ಲಿದ್ದಂತೆ ವೆಚ್ಚ (Cumulative)
28	ಬಾಗೂರು ನವಿಲೆ ಸುರಂಗ ನಿರ್ಗಮನ ಕಾಲುವೆಯಿಂದ ನೀರನ್ನು ಎತ್ತಿ ಹಾಸನಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ಬಾಗೂರು ಹೋಬಳಿಯ 19 ಕೆರೆಗಳಿಗೆ ಕುಡಿಯುವ ನೀರಿಗಾಗಿ ನೀರು ತುಂಬಿಸುವ ಯೋಜನೆ	32.00	9.55
29	ಹೇಮಾವತಿ ನದಿಯಿಂದ ಗುಡ್ಡೇಹೊಸಹಳ್ಳಿ ಗ್ರಾಮದ ಬಳಿಯಿಂದ ಲಿಫ್ಟ್ ಮುಖೇನ ನೀರನ್ನು ಎತ್ತಿ ಕೆ.ಆರ್. ಪೇಟೆ . ನಾಗಮಂಗಲ ಹಾಗೂ ಚನ್ನರಾಯಪಟ್ಟಣ ತಾಲ್ಲೂಕಿನ 69 ಕೆರೆಗಳನ್ನು ಕುಡಿಯುವ ನೀರಿಗಾಗಿ ನೀರು ತುಂಬಿಸುವ ಯೋಜನೆ	212.00	10.40
30	ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಚಾಕೇನಹಳ್ಳಿ ಕೆರೆಗೆ ಹೇಮಾವತಿ ನದಿಯಿಂದ ನೀರನ್ನು ಎತ್ತಿ ಕುಡಿಯುವ ನೀರಿಗಾಗಿ ನೀರು ತುಂಬಿಸುವುದು	54.00	0.00
31	ವಜ್ರನಕಟ್ಟೆ, ಸಿ.ಕಟ್ಟಿಗೇನಹಳ್ಳಿ ಹಾಗೂ ಕೊಪ್ಪ ಕೆರೆಗಳಿಗೆ ಹೇಮಾವತಿ ಯೋಜನೆಯ ಕುಡಿಯುವ ನೀರು ಒದಗಿಸುವುದು.	2.20	1.20
32	ಚಿಕ್ಕನಾಯಕನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆ.	102.60	49.78
33	ಗುಬ್ಬಿ ತಾಲ್ಲೂಕಿನ 19 ಕೆರೆಗಳಿಗೆ ಹಾಗೂ ಚಿಕ್ಕೇಗುಡ್ಡ ಹಾಗೂ ಇತರೆ ಹೋಬಳಿಗಳ 30 ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವುದು.	28.16	21.46
34	ಮಾಗಡಿ/ಕುಣಿಗಲ್ ತಾಲ್ಲೂಕಿನ 84 ಕೆರೆಗಳಿಗೆ ನೀರು ಹರಿಸಿ 289 ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವ ಯೋಜನೆ (ಶ್ರೀರಂಗ ಕು.ನೀ.ಯೋ. ಯೋಜನೆ)	277.50	166.04
35	ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಹೋಬಳಿಯ ನಾಗಮಂಗಲ ಶಾಖಾ ನಾಲೆಯ ವಿತರಣಾ ನಾಲೆ-10 ರ 7 ನೇ ಉಪ ವಿತರಣ ನಾಲೆಯಿಂದ'ಬ್ಯಾಲದ ಕೆರೆ ಮತ್ತು ಇತರೆ ಕೆರೆಗಳಿಗೆ ನೀರು ತುಂಬಿಸುವ ಯೋಜನೆ	2.73	1.27
36	ತುಮಕೂರು ಜಿಲ್ಲೆ ಭದ್ರಾಪುರ ಕೆರೆ ತುಂಬಿಸುವ ಯೋ	5.00	1.98
37	ತಿಪಟೂರು ತಾಲ್ಲೂಕಿನ ರಜತಾದ್ರಿಪುರ ಗ್ರಾಮದ ಸರ್ವೆ	3.30	0.00
38	ಹನಗೋಡು ಶ್ರೇಣಿ ಅಣೆಕಟ್ಟು ನಾಲಾ ಆಧುನೀಕರಣ	151.65	125.61
39	ವಿರಿಜಾ ಅಣೆಕಟ್ಟು ಅಡಿಯಲ್ಲಿ ಬರುವ ಹಾರೋಹಳ್ಳಿ ಹೈ ಲೆವೆಲ್ ಕೆನಾಲ್‌ನ ಆಧುನೀಕರಣ	27.8	13.04

(ರೂ ಕೋಟಿಗಳಲ್ಲಿ)

ಕ್ರ ಸಂ	ಯೋಜನೆಗಳು	ಇತ್ತೀಚಿನ ಅಂದಾಜು ಮೊತ್ತ	ದಿ:1.3.2021 ರಲ್ಲಿದ್ದಂತೆ ವೆಚ್ಚ (Cumulative)
40	ಮಾಧವಮಂತ್ರಿ ಅಣೆಕಟ್ಟು ನಾಲೆಯ ಸರ: 21.00 ರಿಂದ 29.20 ಕಿ.ಮೀ ವರೆಗೆ ನಾಲಾ ಆಧುನೀಕರಣ	8.27	8
41	ರಾಮಸಮುದ್ರ ಅಣೆಕಟ್ಟು ಅಡಿ ಬರುವ ಕಲ್ಲಹಳ್ಳಿ ಶಾಖಾ ನಾಲೆ ಆಧುನೀಕರಣ	1.97	1.54
42	ರಾಮಸಮುದ್ರ ಅಣೆಕಟ್ಟು ಅಡಿ ಬರುವ ಸೌತೇನಹಳ್ಳಿ ಶಾಖಾ ನಾಲೆ ಆಧುನೀಕರಣ	1.32	-
43	ರಾಮಸಮುದ್ರ ಅಣೆಕಟ್ಟು ಶಾಖಾ ನಾಲೆ ಆಧುನೀಕರಣ	6.48	1.49
44	ಬಂಗಾರದೊಡ್ಡಿ ಅಣೆಕಟ್ಟು ನಾಲಾ ಆಧುನೀಕರಣ	14.00	0.01
45	ತಾರಕ ಬಲದಂಡೆ ನಾಲೆಯ ಸರಪಳ 10 ರಿಂದ 36 ಕಿ.ಮೀ	14.50	4.25
46	ಹೆಬ್ಬಳ್ಳ ಎಡದಂಡೆ ನಾಲೆ ಸರ: 0 ಯೊಂದ 27.20 ಕಿ.ಮೀ	15.25	0.07
47	ಹಾರಂಗಿ ಎಡದಂಡೆ ನಾಲೆಯ ಸರಪಳ 85.90 ರಿಂದ 149 ಕಿ.ಮೀ	62.15	42
48	ಸರ್ ಕಾಟನ್, ಹಂಪಾಪುರ ಮತ್ತು ಗುಪ್ಪಮ್ಮ ಕಾಲುವೆ	20.3	13.85
49	ಕಣ್ವ ನಾಲೆಗಳ ಆಧುನೀಕರಣ	40.5	8.34
50	ವಿಶ್ವೇಶ್ವರಯ್ಯ ನಾಲ ಜಾಲದ 2ನೇ ಹಂತದ ಪ್ಯಾಕೇಜ್ -1 ಎ	300	12.24
51	ಹೊಸಹೊಳಲು ಹೈ ಲೆವೆಲ್ ನಾಲೆ ಸರ:0 ರಿಂದ 11 ಕಿ.ಮೀ	6.25	2.14
52	ಹೇಮಾವತಿ ಬಲ ಮೇಲ್ದಂಡೆ ನಾಲೆ ಸರ: 0.00 ಯಿಂದ 96.82 ಕಿ.ಮೀ	380.07	211.86
53	ಹೇಮಾವತಿ ಬಲದಂಡೆ ನಾಲೆ ಸರ:0.00 ರಿಂದ 92.48 ಕಿ.ಮೀ	422.75	109.81
54	ತುಮಕೂರು ಶಾಖಾ ನಾಲೆಯ ಸರ:0.00 ಯಿಂದ 70.00 ಕಿ.ಮೀ ಹಾಗೂ ವೈ-ಅಲೈನ್ಮೆಂಟ್ 15.727 ಯಿಂದ 21.175 ಕಿ.ಮೀ ವರೆಗೆ ರಿ-ಮೋಡೆಲಿಂಗ್ ಕಾಮಗಾರಿ	475	54.65
55	ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಪುರಿಗಾಲಿ ಸಮಗ್ರ ಹನಿ/ತುಂತುರು ನೀರಾವರಿ ಯೋಜನೆ	593.00	328.00
56	ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕಿನ ಅರೆಕೊಪ್ಪ ಹನಿ ನೀರಾವರಿ ಯೋಜನೆ	4.94	0.00
57	ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕಿನ ತಲಕಾಡು ಗ್ರಾಮದ ಬಳಿಯ ಮಾಧವಮಂತ್ರಿ ಅಣೆಕಟ್ಟಿನ ಅಭಿವೃದ್ಧಿ ಕಾಮಗಾರಿ	62.21	13.48

(ರೂ ಕೋಟಿಗಳಲ್ಲಿ)

ಕ್ರ ಸಂ	ಯೋಜನೆಗಳು	ಇತ್ತೀಚಿನ ಅಂದಾಜು ಮೊತ್ತ	ದಿ:1.3.2021 ರಲ್ಲಿದ್ದಂತೆ ವೆಚ್ಚ (Cumulative)
58	ಕೊಡಗು ಜಿಲ್ಲೆಯ ಭಾಗಮಂಡಲದ ಹತ್ತಿರ ಮಡಿಕೇರಿ-ತಲಕಾವೇರಿ ಮತ್ತು ನಾಪೊಕ್ಲು-ತಲಕಾವೇರಿ ರಸ್ತೆಗಳ ಛೇದಕದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಮೇಲು ಸೇತುವೆ ನಿರ್ಮಿಸುವ ಕಾಮಗಾರಿ	29.62	6.38
59	ಕೃಷ್ಣರಾಜಸಾಗರ ಅಣೆಕಟ್ಟೆಯ ದಕ್ಷಿಣದ್ವಾರದ ಬಳಿ ಮಹಾನುಭಾವರಾದ ನಾಲ್ವಡಿ ಕೃಷ್ಣರಾಜ ಒಡೆಯರು ಹಾಗೂ ಸರ್.ಎಂ ವಿಶ್ವೇಶ್ವರಾಯ ರವರ ಪುತ್ಥಳಿ ಹಾಗೂ ಮಂಟಪ ಸ್ಥಾಪನೆಯ ಕಾಮಗಾರಿ	8.50	2.96
60	ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕಿನ ಹೆಗ್ಗನೂರು ಹನಿ ನೀರಾವರಿ ಯೋಜನೆ	22.00	0.001
61	ದೊಡ್ಡಾಲಹಳ್ಳ ಹನಿ ನೀರಾವರಿ ಕಾಮಗಾರಿ	70.00	5.12
62	ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕು ಹೆಬ್ಬಳ್ಳ ಚೆನ್ನಯ್ಯ ನಾಲೆಯ ಬಾಧಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರೊದಗಿಸುವ ಏತ ನೀರಾವರಿ ಕಾಮಗಾರಿ (ತಿಟ್ಟುಮಾರನಹಳ್ಳಿ ಏತ ನೀರಾವರಿ ಯೋಜನೆ)	44	0.01
63	ಮಂಡ್ಯ ಜಿಲ್ಲೆ ಮದ್ದೂರು ತಾಲ್ಲುಕು ಹೊಸ ಮದ್ದೂರು ಶಾಖೆಯ ನಾಲೆಯ ಸರಪಳಿ 47.00.ಕಿ.ಮೀ ಯಿಂದ ಮುಂದಿನ ಭಾಗದ ಭಾದಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸಲು ಹೆಬ್ಬಳ್ಳದಿಂದ ನೀರನ್ನು ಎತ್ತುವ ಯೋಜನೆ. (ಸಿ.ಎ.ಕೆರೆ)	17.74	0
64	ಕಾವೇರಿ ನದಿಗೆ ಅಡ್ಡಲಾಗಿ ಶ್ರೀರಂಗಪಟ್ಟಣ ತಾಲ್ಲೂಕಿನ ಕಾರೇಕುರ ಗ್ರಾಮದ ಹತ್ತಿರ ಮೇಲು ಸೇತುವೆ ನಿರ್ಮಾಣ ಕಾಮಗಾರಿ	78.13	8.20
65	ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕಿನ ಬೈರಮಂಗಲ ಜಲಾಶಯಕ್ಕೆ ಡೈವರ್ಷನ್ ಕಾಲುವೆ ಮತ್ತು ವಿಯರ್ ನಿರ್ಮಿಸುವ ಯೋಜನೆ	110.00	10.45

ಕರ್ನಾಟಕ ವಿಧಾನ ಸಭೆ

1)	ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	2483
2)	ಮಾನ್ಯ ಸದಸ್ಯರ ಹೆಸರು	:	ಶ್ರೀ ಬೆಳ್ಳಿಪ್ರಕಾಶ್ (ಕಡೂರು)
3)	ಉತ್ತರಿಸುವ ದಿನಾಂಕ	:	16/03/2021
4)	ಉತ್ತರಿಸುವ ಸಚಿವರು	:	ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
(ಅ)	ಕಡೂರು ತಾಲ್ಲೂಕು ಹಿರೇನಲ್ಲೂರು ಹೋಬಳಿಯು ಹೆಚ್ಚು ಹಳ್ಳಿಗಳಿಂದ ಕೂಡಿದ್ದು, ಪೊಲೀಸ್ ಠಾಣೆ ಇಲ್ಲದೇ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಹೌದು
(ಆ)	ಬಂದಿದ್ದಲ್ಲಿ ಹಿರೇನಲ್ಲೂರಿನಲ್ಲಿ ಹೊಸ ಪೊಲೀಸ್ ಠಾಣೆಯನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಹಾಗಿದ್ದಲ್ಲಿ ಯಾವ ಹಂತದಲ್ಲಿದೆ ; (ಮಾಹಿತಿ ನೀಡುವುದು)	ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕು ಹಿರೇನಲ್ಲೂರು ಗ್ರಾಮದಲ್ಲಿ ಹೊಸದಾಗಿ ಪೊಲೀಸ್ ಠಾಣೆ ತೆರೆಯುವ ಪ್ರಸ್ತಾವನೆಯು ರಾಷ್ಟ್ರೀಯ ಪೊಲೀಸ್ ಆಯೋಗದ ಮಾರ್ಗಸೂಚಿಯನ್ವಯ ನಿಗದಿಪಡಿಸಿದ ಮಾನದಂಡಗಳನ್ನು ಪೂರೈಸಿದಲ್ಲಿ ಪೊಲೀಸ್ ಠಾಣೆ ತೆರೆಯುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು.
(ಇ)	ಹೊಸ ಪೊಲೀಸ್ ಠಾಣೆಗಳನ್ನು ಮಂಜೂರು ಮಾಡಲು ನಿಗದಿಪಡಿಸಿರುವ ಮಾನದಂಡಗಳೇನು; (ವಿವರ ನೀಡುವುದು)	ಹೊಸ ಪೊಲೀಸ್ ಠಾಣೆಯನ್ನು ಮಂಜೂರು ಮಾಡಲು ನಿಗದಿಪಡಿಸಿರುವ ಮಾನದಂಡಗಳು:- **ಪಿಐ ಪೊಲೀಸ್ ಠಾಣೆ ತೆರೆಯಲು** ವಾರ್ಷಿಕವಾಗಿ 700 ಅಪರಾಧ ಪ್ರಕರಣಗಳು (ಸಂಜ್ಞೇಯ ಐ.ಪಿ.ಸಿ. ಪ್ರಕರಣಗಳು) **ಪಿ.ಎಸ್.ಐ. ಪೊಲೀಸ್ ಠಾಣೆ ತೆರೆಯಲು** 1) ವ್ಯಾಪ್ತಿ – 75 ಮೈಲಿಗಳು / 150 ಚ.ಕಿ.ಮೀ. 2) ವಾರ್ಷಿಕ 300 ಅಪರಾಧ ಪ್ರಕರಣಗಳು 3) ಜನಸಂಖ್ಯೆ 50,000 ರಿಂದ 60,000 (2011ನೇ ಸಾಲಿನ ಜನಗಣತಿ ಪ್ರಕಾರ) **ಸಂಚಾರ ಪೊಲೀಸ್ ಠಾಣೆ ತೆರೆಯಲು** 150 ರಿಂದ 250 ಅಪಘಾತ ಪ್ರಕರಣಗಳು
(ಈ)	ಕಡೂರು ಪಟ್ಟಣದಲ್ಲಿ ಸುಗಮ ಸಂಚಾರ ಕಾರ್ಯಕೈಗೊಳ್ಳಲು ಸಂಚಾರಿ ಪೊಲೀಸ್ ಠಾಣೆ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಸಂಚಾರಿ ಪೊಲೀಸ್ ಠಾಣೆ ಪ್ರಾರಂಭಿಸುವ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;	ಕಡೂರು ಪಟ್ಟಣದಲ್ಲಿ ಸಂಚಾರ ಪೊಲೀಸ್ ಠಾಣೆ ಸೃಜಿಸುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು.

(ಉ)	ಸಂಚಾರ ನಿಯಂತ್ರಣಕ್ಕೆ ಪೊಲೀಸ್ ಠಾಣೆಯಲ್ಲಿ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಸಿಬ್ಬಂದಿಗಳ ನೇಮಕಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)	ಸಂಚಾರ ನಿಯಂತ್ರಣಕ್ಕಾಗಿ ಪೊಲೀಸ್ ಸಿಬ್ಬಂದಿಗಳ ಕೊರತೆ ಕಂಡುಬಂದ ಕಡೆಗಳಲ್ಲಿ ಗೃಹ ರಕ್ಷಕ ದಳದ ಸಿಬ್ಬಂದಿಗಳ ಸೇವೆಯನ್ನು ಸಂಚಾರ ನಿಯಂತ್ರಣಕ್ಕಾಗಿ ಉಪಯೋಗಿಸಿಕೊಳ್ಳಲಾಗುತ್ತಿದೆ. ಇದಲ್ಲದೆ, ವಿವಿಧ ವೃಂದಗಳ ಸಿಬ್ಬಂದಿ/ ಅಧಿಕಾರಿಗಳ ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

ಸಂಖ್ಯೆ: ಹೆಚ್‌ಡಿ 46 ಪಿಓಪಿ 2021

(ಬಸವರಾಜ ಬೊಮ್ಮಾಯಿ)
ಗೃಹ, ಕಾನೂನು ಮತ್ತು ಸಂಸದೀಯ
ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	2435
ಉತ್ತರಿಸಬೇಕಾದ ದಿನಾಂಕ	:	16.03.2021.
ಸದಸ್ಯರ ಹೆಸರು	:	ಡಾ|| ಯತೀಂದ್ರ ಸಿದ್ದರಾಮಯ್ಯ (ವರುಣ)
ಉತ್ತರಿಸುವ ಸಚಿವರು	:	ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

ಕ್ರಸ	ಪ್ರಶ್ನೆ	ಉತ್ತರ
1	ವರುಣ ವಿಧಾನ ಸಭಾ ಕ್ಷೇತ್ರದಲ್ಲಿ ಈವರೆಗೆ ಎಷ್ಟು ಗರಡಿ ಮನೆಗಳನ್ನು ನಿರ್ಮಿಸಲಾಗಿದೆ; (ಕಳೆದ ಮೂರು ವರ್ಷಗಳ ಮಾಹಿತಿ ನೀಡುವುದು)	ವರುಣ ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಲ್ಲಿ ಟಿ. ನರಸೀಪುರದ ಶ್ರೀರಾಮಪುರ ಬೀದಿಯ ಶ್ರೀ ರಾಮಾಂಜನೇಯ ಗರಡಿ ಮನೆಯನ್ನು 2019-2020ನೇ ಸಾಲಿನಲ್ಲಿ ರೂ.10.00ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ. ನಂಜನಗೂಡು ತಾಲ್ಲೂಕು ಹಾಡ್ಯ ಗ್ರಾಮದಲ್ಲಿ ಗರಡಿಮನೆ ನಿರ್ಮಾಣಕ್ಕೆ 2019-20ನೇ ಸಾಲಿನಲ್ಲಿ ರೂ.10.00 ಲಕ್ಷ ಅನುದಾನವನ್ನು ನಿರ್ಮಿತಿ ಕೇಂದ್ರ, ಮೈಸೂರು ಇವರಿಗೆ ಬಿಡುಗಡೆ ಮಾಡಲಾಗಿದ್ದು, ಸೂಕ್ತ ನಿವೇಶನದ ಅಲಭ್ಯತೆ ಹಿನ್ನೆಲೆಯಲ್ಲಿ ಕಾಮಗಾರಿ ಪ್ರಾರಂಭಗೊಂಡಿರುವುದಿಲ್ಲ. During previous three years in Varuna Constituency, construction of Wrestling hall at Sriramapura Beedi, T. Narasipura Taluk, is completed at a cost of Rs.10.00 Lakhs during 2019-20. Construction of wrestling Hall at Haadya Village, Nanjangud Taluk at a cost of Rs. 10.00 Lakhs released to Nirmithi Kendra, Mysuru, during 2019-20. Is not started due to non availability of land.
2	ಅಪೂರ್ಣಗೊಂಡ ಗರಡಿ ಮನೆಗಳು ಎಷ್ಟು; ಈ ರೀತಿ ಅಪೂರ್ಣಗೊಂಡ ಗರಡಿ ಮನೆ ಕಾಮಗಾರಿ ಗಳನ್ನು ಯಾವಾಗ ಪೂರ್ಣ ಗೊಳಿಸಲಾಗುವುದು;	ವರುಣ ವಿಧಾನ ಸಭಾ ಕ್ಷೇತ್ರದಲ್ಲಿ ಅಪೂರ್ಣಗೊಂಡಿರುವ ಗರಡಿ ಮನೆಗಳು ಇರುವುದಿಲ್ಲ. ಆದರೆ, ಮೈಸೂರಿನ ವರುಣ ಕ್ಷೇತ್ರ ವ್ಯಾಪ್ತಿಯಲ್ಲಿನ ನಂಜನಗೂಡು ತಾಲ್ಲೂಕಿನ ಹಾಡ್ಯ ಗ್ರಾಮದಲ್ಲಿ ಗರಡಿಮನೆ ನಿರ್ಮಾಣಕ್ಕೆ ರೂ.10.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ನಿವೇಶನ ಅಲಭ್ಯತೆಯ ಕಾರಣ ಕಾಮಗಾರಿ ಪ್ರಾರಂಭಿಸಿರುವುದಿಲ್ಲ. ನಿವೇಶನ ಲಭ್ಯವಾದ ಕೂಡಲೇ ಕಾಮಗಾರಿ ಪ್ರಾರಂಭಿಸಲಾಗುವುದು.

		No incomplete wrestling Hall in Varuna Assembly Constituency. However, an amount of Rs.10.00 lakhs has been released for construction of wrestling Hall at Haadya Village, Nanjangud Taluk in Varuna Constituency but the work is not started due to non availability of land. Construction of this wrestling Hall will be started once the land is made available.
3	ಎಷ್ಟು ಗರಡಿ ಮನೆಗಳಿಗೆ ಕ್ರೀಡಾ ಸಲಕರಣೆಗಳನ್ನು ವಿತರಣೆ ಮಾಡಲಾಗಿದೆ; ಎಷ್ಟು ಮೊತ್ತ ವೆಚ್ಚ ಮಾಡಲಾಗಿದೆ; (ಮಾಹಿತಿ ನೀಡುವುದು)	ಕಳೆದ ಮೂರು ವರ್ಷಗಳಲ್ಲಿ ವರುಣ ವಿಧಾನ ಸಭಾ ಕ್ಷೇತ್ರದ ಯಾವುದೇ ಗರಡಿ ಮನೆಗಳಿಗೆ ಕ್ರೀಡಾ ಸಲಕರಣೆಗಳನ್ನು ಒದಗಿಸಿರುವುದಿಲ್ಲ. No Sports materials have been provided to Wrestling halls in the previous three years in Varuna Constituency.
4	ಬಾಕಿ ಇರುವ ಗರಡಿ ಮನೆಗಳಿಗೆ ಯಾವ ಕಾಲಮಿತಿಯಲ್ಲಿ ಸಲಕರಣೆಗಳನ್ನು ವಿತರಣೆ ಮಾಡಲಾಗುವುದು? (ಮಾಹಿತಿ ನೀಡುವುದು)	2020-21ನೇ ಸಾಲಿನಲ್ಲಿ ಮೈಸೂರು ಜಿಲ್ಲೆಯ 14 ಗರಡಿ ಮನೆಗಳಿಗೆ ಒಟ್ಟು ರೂ.4.90 ಲಕ್ಷಗಳ ವೆಚ್ಚದಲ್ಲಿ ವಿವಿಧ ಅಂಗ ಸಾಧನಾ ಉಪಕರಣಗಳನ್ನು ಒದಗಿಸುವ ಬಗ್ಗೆ ಜಿಲ್ಲಾ ಪಂಚಾಯತ್ ವಲಯದಲ್ಲಿ ಅನುದಾನ ಮಂಜೂರಾಗಿದ್ದು, ಶೀಘ್ರದಲ್ಲಿ ಸದರಿ ಸಾಮಗ್ರಿಗಳನ್ನು ಅರ್ಹ ಗರಡಿ ಮನೆಗಳಿಗೆ ವಿತರಿಸಲಾಗುವುದು. Under Zilla Panchayath grants Rs. 4.90 Lakhs has been granted for the year 2020-21 to provide equipments to 14 wrestling halls in Mysuru District and the equipments will be distributed to eligible wrestling halls at the earliest.

ವೈಎಸ್‌ಡಿ-ಇಬಿಬಿ/35/2021.

(ಡಾ|| ನಾರಾಯಣ ಗೌಡ)
ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು.

ಕರ್ನಾಟಕ ವಿಧಾನ ಸಭೆ

01.	ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	: 2456
02.	ಮಾನ್ಯ ವಿಧಾನ ಸಭೆಯ ಸದಸ್ಯರ ಹೆಸರು	: ಶ್ರೀಮತಿ ಸೌಮ್ಯ ರೆಡ್ಡಿ (ಜಯನಗರ)
03.	ಉತ್ತರಿಸುವ ದಿನಾಂಕ	: 16.03.2021
04.	ಉತ್ತರಿಸುವ ಸಚಿವರು.	: ಮಾನ್ಯ ಗೃಹ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಇತ್ತೀಚೆಗೆ ಅತ್ಯಾಚಾರ ಪ್ರಕರಣಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ರಾಜ್ಯದಲ್ಲಿ ಇತ್ತೀಚೆಗೆ ಅತ್ಯಾಚಾರ ಪ್ರಕರಣಗಳು ವರದಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಕಳೆದ 03 ವರ್ಷಗಳಲ್ಲಿ ರಾಜ್ಯದಲ್ಲಿ ದಾಖಲಾದ ಅತ್ಯಾಚಾರ ಪ್ರಕರಣಗಳ ವಿವರ ಕೆಳಕಂಡಂತಿರುತ್ತದೆ. 2018: 485; 2019: 497; 2020: 477; 2021(ಫೆಬ್ರವರಿ): 76
ಆ)	ಶಾಲಾ-ಕಾಲೇಜು ವಿದ್ಯಾರ್ಥಿನಿಯರಿಗೆ ಹಾಗೂ ಮಹಿಳೆಯರಿಗೆ ಸ್ವಯಂ ರಕ್ಷಣಾ ಕೌಶಲ್ಯವನ್ನು ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರವು ಹಾಕಿಕೊಂಡಿರುವ ಯೋಜನೆಗಳು ಅಥವಾ ಕೈಗೊಂಡಿರುವ ಕ್ರಮಗಳು ಏನು; (ವಿವರ ನೀಡುವುದು)	➢ ರಾಜ್ಯದ ಪ್ರತಿಯೊಂದು ಜಿಲ್ಲೆಗಳಲ್ಲಿ ಮಹಿಳೆಯರ ಮತ್ತು ಮಕ್ಕಳ ರಕ್ಷಣೆಗಾಗಿ ವಿಶೇಷ ಪಡೆಗಳು ಕಾರ್ಯನಿರ್ವಹಿಸುತ್ತಿರುತ್ತವೆ. ➢ ಸದರಿ ವಿಶೇಷ ಪಡೆಗಳಲ್ಲಿ ವಿಶೇಷವಾಗಿ ಮಹಿಳಾ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಿದ್ದು ಅವರುಗಳಿಂದ ಎಲ್ಲಾ ಶಾಲಾ/ಕಾಲೇಜುಗಳ ಹತ್ತಿರ ಮತ್ತು ಮಹಿಳೆಯರು & ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಸೇರುವ ಪ್ರದೇಶಗಳು ಹಾಗೂ ಜನನಿಬಿಡ ಸ್ಥಳಗಳಲ್ಲಿ ವಿಶೇಷ ಗಸ್ತು ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. ➢ ಸದರಿ ಸಿಬ್ಬಂದಿ ರವರು ತೆರೆದ ಮನೆ ಯೋಜನೆಯ ಮೂಲಕ ಮಕ್ಕಳಿಗಾಗಿ ಹಾಗು ಜನ ಸಂಪರ್ಕ ಸಭೆಯ ಮೂಲಕ ಮಹಿಳೆಯರಿಗೆ ಸ್ವಯಂ ರಕ್ಷಣೆಯ ಬಗ್ಗೆ ಕರಾಟೆ ಮತ್ತು ಕೆಲವು ಕೌಶಲ್ಯಗಳ ಬಗ್ಗೆ ಪ್ರಾತ್ಯಕ್ಷಿಕೆಯ ಮೂಲಕ ಜಾಗೃತಿ ಮೂಡಿಸಲಾಗುತ್ತಿರುತ್ತದೆ. ➢ ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ಹತ್ತಿಕ್ಕುವ ನಿಟ್ಟಿನಲ್ಲಿ ಬೆಂಗಳೂರು ನಗರದಲ್ಲಿ "ವೀರವನಿತೆ" ತಂಡವನ್ನು ರಚಿಸಿ, ಸದರಿಯವರಿಗೆ 6 ತಿಂಗಳು ನುರಿತ ತಜ್ಞರಲ್ಲಿ ಸ್ವಯಂ ರಕ್ಷಣೆ ಮತ್ತು ಮಾರ್ಷಿಯಲ್ ಆರ್ಟ್ಸ್ ಬಗ್ಗೆ ತರಬೇತಿ ನೀಡಿ, ನಂತರ ಸದರಿ ಯುವರುಗಳನ್ನು 3 ತಂಡಗಳನ್ನಾಗಿ ರಚಿಸಿ ಮೇಲಾಧಿಕಾರಿಗಳ ನೇತೃತ್ವದಲ್ಲಿ ನಗರದ ವಿವಿಧ ಶಾಲಾ-ಕಾಲೇಜುಗಳು ಮತ್ತು ಮಹಿಳೆಯರು ಹೆಚ್ಚಾಗಿ ಕೆಲಸ ನಿರ್ವಹಿಸುವ

		ಗಾರ್ಮೆಂಟ್ಸ್‌ಗಳು, ಮಾಲ್ ಮತ್ತಿತರ ಕಡೆಗಳಲ್ಲಿ ಸದರಿಯವರುಗಳಿಗೆ ಸ್ವಯಂ ರಕ್ಷಣೆಯ ಬಗ್ಗೆ ಮಾಹಿತಿ ಹಾಗೂ ತರಬೇತಿಗಳನ್ನು ನೀಡಲಾಗಿರುತ್ತದೆ.
ಇ)	ಈ ಪ್ರಕರಣಗಳಿಗೆ ಸಂಬಂಧಿಸಿಂತೆ ಇತರೆ ದೇಶಗಳಲ್ಲಿ ಶೀಘ್ರವೇ ಶಿಕ್ಷೆಯನ್ನು ವಿಧಿಸುತ್ತಿದ್ದು ಇಲ್ಲಿ ಶಿಕ್ಷೆಯನ್ನು ನಿಧಾನಗತಿಯಲ್ಲಿ ವಿಧಿಸುತ್ತಿರಲು ಕಾರಣಗಳೇನು?	ರಾಜ್ಯದಲ್ಲಿ ಮಹಿಳೆಯರ ಮತ್ತು ಮಕ್ಕಳ ಮೇಲಿನ ಅಪರಾಧಗಳ ಕುರಿತಂತೆ ದಂಢ ವಿಧಿ (ತಿದ್ದುಪಡಿ) ಅಧಿನಿಯಮ ಸುಗ್ರಿವಾಜ್ಞೆ-2018 ಅನ್ನು ಜಾರಿಗೊಳಿಸಲಾಗಿರುತ್ತದೆ. ಈ ದಂಡ ವಿಧಿ (ತಿದ್ದುಪಡಿ) ಯಲ್ಲಿ (ಭಾರತೀಯ ದಂಡ ಸಂಹಿತೆ, 1860, ಭಾರತೀಯ ಸಾಕ್ಷ್ಯ ಅಧಿನಿಯಮ, 1872, ಭಾರತ ದಂಡ ಪ್ರಕ್ರಿಯಾ ಸಂಹಿತೆ, 1973, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ, 2012) ಗಳಿಗೆ ತಿದ್ದುಪಡಿಯನ್ನು ಮಾಡಲಾಗಿದ್ದು, ಈ ತಿದ್ದುಪಡಿಯಲ್ಲಿ ಅತ್ಯಾಚಾರ, ಲೈಂಗಿಕ ಕಿರುಕುಳದಂತಹ ಅಪರಾಧಗಳಿಗೆ ಶಿಕ್ಷೆಯ ಪ್ರಮಾಣವನ್ನು ಹೆಚ್ಚಿಸಲಾಗಿರುತ್ತದೆ ಹಾಗೂ ತನಿಖಾ ಅವಧಿಯನ್ನು 90 ದಿನದಿಂದ 60 ದಿನಗಳಿಗೆ ಇಳಿಸಲಾಗಿದೆ. ಈ ಸಂಬಂಧ ಎಲ್ಲಾ ಘಟಕಾಧಿಕಾರಿಗಳಿಗೆ ಪೊಲೀಸ್ ಪ್ರಧಾನ ಕಛೇರಿಯ ಸುತ್ತೋಲೆ ಸಂ.ಅಪರಾಧ-3(1)/38/2018, ದಿನಾಂಕ: 06/07/2018 ರಂದು ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ. ಈ ಸಂಭಂಧ ತನಿಖೆಯನ್ನು ಯಾವುದೇ ವಿಳಂಬವಿಲ್ಲದೇ ಶೀಘ್ರವಾಗಿ ಪೂರ್ಣಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಹ ಸಲ್ಲಿಸಲಾಗುತ್ತಿದೆ. ಮುಂದುವರೆದು ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆಗಾಗಿ " ಪಿಂಕ್ ಹೊಯ್ಸಳ" ಮತ್ತು 112 ಗಸ್ತು ವಾಹನ ದಿನದ 24 ಗಂಟೆಯೂ ಸಹ ಗಸ್ತು ಕಾರ್ಯ ನಿರ್ವಹಿಸುತ್ತಿದೆ. ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆಗಾಗಿ ರಾಜ್ಯದ ವಿವಿಧೆಡೆಗಳಲ್ಲಿ 33 ಹೊಸ ಮಹಿಳಾ ಪೊಲೀಸ್ ಠಾಣೆಯನ್ನು ಸೃಜಿಸಲಾಗಿದೆ. ಪೊಲೀಸ್ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಪೊಲೀಸ್ ಸಿಬ್ಬಂದಿಯ ನೇರ ನೇಮಕಾತಿಯಲ್ಲಿ ಶೇಕಡ 25% ರಷ್ಟು ಮಹಿಳಾ ಅಭ್ಯರ್ಥಿಗಳಿಗೆ ಮೀಸಲಾತಿ ಕಲ್ಪಿಸಲಾಗಿರುತ್ತದೆ.

HD 7 SDN 2021

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	2457
ಸದಸ್ಯರ ಹೆಸರು	:	ಶ್ರೀ ಭೀಮಾ ನಾಯ್ಕ ಎಸ್. (ಹಗರಿಬೊಮ್ಮನಹಳ್ಳಿ)
ಉತ್ತರಿಸಬೇಕಾದ ದಿನಾಂಕ	:	16.03.2021
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

****

ಪ್ರಶ್ನೆ		ಉತ್ತರ
ಅ)	ಹಗರಿಬೊಮ್ಮಹಳ್ಳಿ ವಿಧಾನಸಭಾ ಕ್ಷೇತ್ರದ ತೆಲುಗೋಳಿ ಗ್ರಾಮದಲ್ಲಿ 66 ಕೆ.ವಿ. ವಿದ್ಯುತ್ ಉಪಕೇಂದ್ರಕ್ಕೆ ಭೂ ಮಂಜೂರಾತಿ ಪ್ರಕ್ರಿಯೆ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹಗರಿಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರದ ತೆಲುಗೋಳಿ ಗ್ರಾಮಕ್ಕೆ 66/11 ಕೆವಿ ತಂಬ್ರಹಳ್ಳಿ ಉಪಕೇಂದ್ರದ 11 ಕೆವಿ F10 ತೆಲುಗೋಳ NJY ಫೀಡರ್ ಮತ್ತು 11 ಕೆವಿ F1 ಮುತ್ಕುರ IP Set ಫೀಡರ್ ಹಾಗೂ ಗುಡ್ಡಾ IP Set ಫೀಡರ್ ಮುಖಾಂತರ ತೇಲುಗೋಳಿ ಹಾಗೂ ಸುತ್ತಲಿನ ಗ್ರಾಮಗಳಾದ ರಾಮೇಶ್ವರ, ಬಂಡಿ, ಕಿತ್ತನೂರು, ಮುತ್ಕುರ, ತಾಂಬ್ರಳ್ಳಿ ಉತ್ತರ ಗ್ರಾಮಗಳಿಗೆ ಸಮರ್ಪಕ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.
ಆ)	ಬಂದಿದ್ದಲ್ಲಿ, ಪ್ರಕ್ರಿಯೆ ವಿಳಂಬಗೊಳ್ಳಲು ಕಾರಣವೇನು ಮತ್ತು ಯೋಜನೆಯು ಯಾವ ಹಂತದಲ್ಲಿದೆ?	ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ತೆಲುಗೋಳಿ ಗ್ರಾಮದಿಂದ ಸುಮಾರು 10 ಕಿ.ಮೀ. ದೂರದಲ್ಲಿರುವ ಜಿ.ಕೋಡಿಹಳ್ಳಿ ಗ್ರಾಮದಲ್ಲಿ 66/11 ಕೆ.ವಿ. ವಿದ್ಯುತ್ ಉಪಕೇಂದ್ರ ಸ್ಥಾಪಿಸಲು ಕವಿಪ್ರನಿನಿ ಯಿಂದ ಅನುಮೋದನೆಗೊಂಡಿದ್ದು, ಜಮೀನು ಖರೀದಿ ಪ್ರಕ್ರಿಯೆಯು ಪ್ರಗತಿಯಲ್ಲಿದೆ. ಇದರಿಂದ 66/11 ಕೆ.ವಿ.ತಂಬ್ರಹಳ್ಳಿ ವಿದ್ಯುತ್ ಉಪಕೇಂದ್ರದ ಒತ್ತಡವನ್ನು 50% ವರೆಗೆ ಕಡಿಮೆ ಮಾಡಬಹುದಾಗಿರುತ್ತದೆ. ಆದುದರಿಂದ, ತೆಲುಗೋಳಿ ಗ್ರಾಮದಲ್ಲಿ ಹೊಸದಾಗಿ 66/11 ಕೆ.ವಿ. ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವ ಅವಶ್ಯಕತೆಯಿರುವುದಿಲ್ಲ.

ಸಂಖ್ಯೆ: ಎನರ್ಜಿ 75 ಪಿಪಿಎಂ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

<u>ಕರ್ನಾಟಕ ವಿಧಾನಸಭೆ</u>

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	2499
ಸದಸ್ಯರ ಹೆಸರು	:	ಶ್ರೀ ನಂಜೇಗೌಡ ಕೆ.ವೈ. (ಮಾಲೂರು)
ಉತ್ತರಿಸಬೇಕಾದ ದಿನಾಂಕ	:	16.03.2021
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

****

ಪ್ರಶ್ನೆ		ಉತ್ತರ
ಅ)	ರಾಜ್ಯದಲ್ಲಿ ಬೇಸಿಗೆ ಕಾಲ ಹತ್ತಿರವಾಗುತ್ತಿರುವುದರಿಂದ ಸಾರ್ವಜನಿಕರಿಗೆ ಕುಡಿಯುವ ನೀರು ಮತ್ತು ಕೃಷಿಕ ರೈತರಿಗೆ ಸಮರ್ಪಕ ವಿದ್ಯುತ್ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ವಿವರ ಒದಗಿಸುವುದು);	ರಾಜ್ಯದಲ್ಲಿ ಜಲ ವಿದ್ಯುತ್, ಉಷ್ಣ ವಿದ್ಯುತ್, ನವೀಕರಿಸಬಹುದಾದ (ಸೋಲಾರ್, ವಿಂಡ್, ಬಯೋಮಾಸ್) ವಿದ್ಯುತ್ ಮೂಲಗಳು ಹಾಗೂ ಸಿಜಿಎಸ್ ಮೂಲಗಳಿಂದ ಸಾಕಷ್ಟು ಪ್ರಮಾಣದ ವಿದ್ಯುತ್ ಲಭ್ಯವಿರುತ್ತದೆ. ಬೇಸಿಗೆ ಕಾಲದಲ್ಲಿ ಕುಡಿಯುವ ನೀರು ಮತ್ತು ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಒದಗಿಸಲು ಯಾವುದೇ ತೊಂದರೆಯಿರುವುದಿಲ್ಲ. ಸಾರ್ವಜನಿಕರಿಗೆ ಕುಡಿಯುವ ನೀರಿನ ಸ್ಥಾವರಗಳಿಗೆ 24 ಗಂಟೆಗಳ ಕಾಲ 3 ಫೇಸ್ ವಿದ್ಯುತ್ತನ್ನು ಒದಗಿಸಲಾಗುತ್ತಿದೆ ಹಾಗೂ ರೈತರ ಕೃಷಿ ಪಂಪ್‌ಸೆಟ್‌ಗಳ ಫೀಡರ್‌ಗಳಿಗೆ ಪ್ರಸ್ತುತ ಜಾರಿಯಲ್ಲಿರುವ ಆದೇಶದಂತೆ 7 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ತಾಂತ್ರಿಕ ಸಾಧ್ಯತೆ ಇರುವ ಕೃಷಿ ಪಂಪ್‌ಸೆಟ್‌ಗಳ ಫೀಡರ್‌ಗಳಿಗೆ ಹಗಲಿನ ವೇಳೆಯಲ್ಲಿಯೇ ನಿರಂತರ 7 ಗಂಟೆಗಳ ಕಾಲ 3 ಫೇಸ್ ವಿದ್ಯುತ್ತನ್ನು ಸರಬರಾಜು ಮಾಡಲಾಗುತ್ತಿದೆ.
ಆ)	ಮಾಲೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋದಾಗ, ಅವುಗಳನ್ನು ತ್ವರಿತವಾಗಿ ಬದಲಾಯಿಸದೇ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ಕೆ.ಜಿ.ಎಫ್. ವಿಭಾಗ ವ್ಯಾಪ್ತಿಯ ಮಾಲೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ನಗರ ಪ್ರದೇಶಗಳ ಪರಿವರ್ತಕಗಳು ವಿಫಲಗೊಂಡಲ್ಲಿ 24 ಗಂಟೆಗಳ ಒಳಗಾಗಿ ಹಾಗೂ ರೈತರ ಕೃಷಿ ಪಂಪ್‌ಸೆಟ್‌ಗಳ ಪರಿವರ್ತಕಗಳು ವಿಫಲಗೊಂಡಲ್ಲಿ 72 ಗಂಟೆಗಳ ಒಳಗೆ ಕೆ.ಇ.ಆರ್.ಸಿ. ನಿಯಮಾನುಸಾರ ಯಾವುದೇ ರೀತಿಯ ವಿಳಂಬ ಧೋರಣೆ ಅನುಸರಿಸದೆ ಬದಲಾಯಿಸಲಾಗುತ್ತಿದೆ. ಮಾಲೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2020-21 ನೇ ಸಾಲಿನ ಫೆಬ್ರವರಿ-2021ರ ಅಂತ್ಯಕ್ಕೆ 337 ಸಂಖ್ಯೆಯ ಪರಿವರ್ತಕಗಳು ವಿಫಲಗೊಂಡಿದ್ದು, ಎಲ್ಲಾ ಪರಿವರ್ತಕಗಳನ್ನು ಈಗಾಗಲೇ ಬದಲಾಯಿಸಲಾಗಿರುತ್ತದೆ. ಪರಿವರ್ತಕವನ್ನು ಅಳವಡಿಸುವ ತನಕ ತಾತ್ಕಾಲಿಕವಾಗಿ ಸಮೀಪದಲ್ಲಿರುವ ಪರಿವರ್ತಕದ ತಾಂತ್ರಿಕ ಸಾಧ್ಯತೆಗನುಗುಣವಾಗಿ LT ಜಾಲ ಸಂಪರ್ಕ ನೀಡಿ ಗ್ರಾಹಕರಿಗೆ ಯಾವುದೇ ತೊಂದರೆಯಾಗದಂತೆ ವಿದ್ಯುತ್ ಸರಬರಾಜು ಮಾಡಲಾಗಿರುತ್ತದೆ. ಮಾಲೂರು ಉಪವಿಭಾಗದಲ್ಲಿ ವಿಫಲಗೊಂಡಿರುವ ಪರಿವರ್ತಕಗಳನ್ನು ದುರಸ್ಥಿಗೊಳಿಸುವ ದೃಷ್ಟಿಯಿಂದ ಮಾಲೂರು ತಾಲ್ಲೂಕಿನಲ್ಲಿ ವಿದ್ಯುತ್ ಪರಿವರ್ತಕ ದುರಸ್ಥಿ ಕೇಂದ್ರವು ಕಾರ್ಯನಿರ್ವಹಿಸುತ್ತಿರುತ್ತದೆ.
ಇ)	ಹಾಗಿದ್ದಲ್ಲಿ, ಈ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;	

		ವಿಫಲವಾದ ಪರಿವರ್ತಕಗಳನ್ನು ಬದಲಾಯಿಸಲು ಮಾಲೂರಿನಲ್ಲಿ ಪರಿವರ್ತಕ ಬ್ಯಾಂಕ್‌ನ್ನು ಸ್ಥಾಪಿಸಲಾಗಿದ್ದು, ಫೆಬ್ರವರಿ 2021 ಅಂತ್ಯಕ್ಕೆ ವಿವಿಧ ಸಾಮರ್ಥ್ಯದ ಒಟ್ಟು 30 ಸಂಖ್ಯೆಯ ಪರಿವರ್ತಕಗಳನ್ನು ದಾಸ್ತಾನು ಇರಿಸಲಾಗಿದೆ.
ಈ)	ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋದಾಗ ಅವುಗಳನ್ನು ಬದಲಾಯಿಸಲು ಇರುವ ಮಾನದಂಡಗಳೇನು (ವಿವರ ಒದಗಿಸುವುದು);	ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗ ನಿಯಮಾನುಸಾರ ನಗರ ಪ್ರದೇಶಗಳಲ್ಲಿ ಪರಿವರ್ತಕಗಳು ವಿಫಲಗೊಂಡಲ್ಲಿ 24 ಗಂಟೆಗಳ ಒಳಗಾಗಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಪರಿವರ್ತಕಗಳು ವಿಫಲಗೊಂಡಲ್ಲಿ 72 ಗಂಟೆಗಳ ಒಳಗೆ ಬದಲಾಯಿಸಲಾಗುತ್ತಿದೆ. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯಲ್ಲಿ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಕೆಯಲ್ಲಿ ಯಾವುದೇ ರೀತಿಯ ತೊಂದರೆಯಾಗದಂತೆ ಈ ಕೆಳಕಂಡ ವ್ಯವಸ್ಥೆಯನ್ನು ಕೈಗೊಳ್ಳಲಾಗುತ್ತಿದೆ: • ವಿಫಲವಾದ ಪರಿವರ್ತಕವನ್ನು ಬದಲಾಯಿಸುವ ತನಕ ತಾತ್ಕಾಲಿಕವಾಗಿ ಸಮೀಪದಲ್ಲಿರುವ ಪರಿವರ್ತಕದಿಂದ ತಾಂತ್ರಿಕ ಸಾಧ್ಯತೆಗನುಗುಣವಾಗಿ LT ಜಾಲ ಸಂಪರ್ಕ ನೀಡಿ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. • ಬೆ.ವಿ.ಕಂಪನಿಯ ವ್ಯಾಪ್ತಿಯಲ್ಲಿ ತಾಲ್ಲೂಕುವಾರು 45 ಸಂಖ್ಯೆಯ ಪರಿವರ್ತಕ ದುರಸ್ತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ದುರಸ್ತಿಗೊಂಡ ಪರಿವರ್ತಕಗಳನ್ನು ತಾಲ್ಲೂಕು ಮಟ್ಟದಲ್ಲಿ ತೆರೆಯಲಾದ ಪರಿವರ್ತಕಗಳ ಬ್ಯಾಂಕ್‌ಗಳಲ್ಲಿ ಹಾಗೂ ಉಗ್ರಾಣಗಳಲ್ಲಿ ದಾಸ್ತಾನನ್ನು ಇರಿಸಲಾಗುತ್ತಿದೆ. • ಬೆ.ವಿ.ಕಂಪನಿಯ ಉಪವಿಭಾಗವಾರು ಒಟ್ಟು 48 ಸಂಖ್ಯೆಯ ಪರಿವರ್ತಕಗಳ ಬ್ಯಾಂಕುಗಳನ್ನು ತೆರೆಯಲಾಗಿದ್ದು, ಸದರಿ ಪರಿವರ್ತಕ ಬ್ಯಾಂಕ್‌ಗಳಲ್ಲಿ, ದಿನಾಂಕ: 28.02.2021ರ ಅಂತ್ಯಕ್ಕೆ ಒಟ್ಟು 774 ಸಂಖ್ಯೆಯ ವಿವಿಧ ಸಾಮರ್ಥ್ಯದ ಹೊಸ / ದುರಸ್ತಿಗೊಂಡ ಪರಿವರ್ತಕಗಳನ್ನು ದಾಸ್ತಾನು ಇರಿಸಲಾಗಿದೆ ಹಾಗೂ ವಿಭಾಗವಾರು ಒಟ್ಟು 26 ಸಂಖ್ಯೆಯ ಉಗ್ರಾಣಗಳಿದ್ದು, ದಿನಾಂಕ:28.02.2021ರ ಅಂತ್ಯಕ್ಕೆ ಒಟ್ಟು 2428 ಸಂಖ್ಯೆಯ ವಿವಿಧ ಸಾಮರ್ಥ್ಯದ ಹೊಸ / ದುರಸ್ತಿಗೊಂಡ ಪರಿವರ್ತಕಗಳನ್ನು ದಾಸ್ತಾನು ಇರಿಸಲಾಗಿದೆ.
ಉ)	ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗಿರುವ ಬಗ್ಗೆ ಇಲಾಖಾ ಅಧಿಕಾರಿಗಳಿಗೆ ಮಾಹಿತಿ ಒದಗಿಸಿದಾಗ ಅವರುಗಳ ಜವಾಬ್ದಾರಿಗಳೇನು? (ಮಾಹಿತಿ ಒದಗಿಸುವುದು)	• ಬೆ.ವಿ.ಕಂಪನಿಯಲ್ಲಿ ಕೆ.ಇ.ಆರ್.ಸಿ ನಿಯಮಾನುಸಾರ ಗ್ರಾಮೀಣ ಪ್ರದೇಶಗಳಲ್ಲಿ 72 ಗಂಟೆಯ ಒಳಗೆ ಮತ್ತು ನಗರ ಪ್ರದೇಶಗಳಲ್ಲಿ 24 ಗಂಟೆಗಳ ಒಳಗಾಗಿ ವಿಫಲಗೊಂಡ ಪರಿವರ್ತಕಗಳನ್ನು ಬದಲಾಯಿಸಿ, ಉತ್ತಮ ಗುಣಮಟ್ಟದ ವಿದ್ಯುತ್ ಸರಬರಾಜು ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ. • ಬೆ.ವಿ.ಕಂಪನಿಯ ವ್ಯಾಪ್ತಿಯಲ್ಲಿ ಪರಿವರ್ತಕಗಳು ವಿಫಲವಾದಲ್ಲಿ ಸಹಾಯವಾಣಿ ಸಂಖ್ಯೆ:1912 ಅಥವಾ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರನ್ನು ಸಲ್ಲಿಸಬಹುದಾಗಿರುತ್ತದೆ. • ಸಂಬಂಧಿಸಿದ ಶಾಖಾಧಿಕಾರಿಗಳು ಗ್ರಾಹಕದೂರು ಕೇಂದ್ರದಲ್ಲಿ ದಾಖಲಿಸಿದ ದೂರಿನ ಮೇರೆಗೆ ಅಥವಾ ಸ್ವಂತ ದಾಖಲಿಸಿದ ದೂರಿನ ಮೇರೆಗೆ, ಡಾಕೆಟ್ ನಂಬರನ್ನು ಬೆವಿಕಂನ ಗ್ರಾಹಕದೂರು ಕೇಂದ್ರದಿಂದ ಪಡೆದು ಸ್ಥಳ ಪರಿಶೀಲಿಸಿ ಪರಿವರ್ತಕ ವಿಫಲಗೊಂಡ ಬಗ್ಗೆ ಖಚಿತಪಡಿಸಿಕೊಂಡು, ವಿಫಲಗೊಂಡ ಪರಿವರ್ತಕಗಳನ್ನು ಬದಲಾಯಿಸಿ ಯಾವುದೇ ರೀತಿಯ ತೊಂದರೆಯಾಗದಂತೆ ಸಕಾಲದಲ್ಲಿ ವಿದ್ಯುತ್ ಪೂರೈಸಲಾಗುತ್ತಿದೆ.

ಸಂಖ್ಯೆ: ಎನರ್ಜಿ 76 ಪಿಪಿಎಂ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2407
2. ಸದಸ್ಯರ ಹೆಸರು : ಶ್ರೀ ಶಿವಣ್ಣ.ಬಿ.
3. ಉತ್ತರಿಸಬೇಕಾದ ದಿನಾಂಕ : 16.03.2021
4. ಉತ್ತರಿಸುವ ಸಚಿವರು : ಸಣ್ಣ ನೀರಾವರಿ ಸಚಿವರು.

ಕ್ರ ಸಂ.	ಪ್ರಶ್ನೆಗಳು	ಉತ್ತರಗಳು
ಅ	ಆನೇಕಲ್ ತಾಲ್ಲೂಕಿನ ಕೆರೆಗಳಿಗೆ ಬೆಂಗಳೂರು ನಗರದ ಸಂಸ್ಕರಿಸಿದ ನೀರನ್ನು ತುಂಬಿಸುವ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ? (ಪೂರ್ಣ ಮಾಹಿತಿ ನೀಡುವುದು)	ಸಣ್ಣ ನೀರಾವರಿ ಇಲಾಖೆಯಡಿ ಬೆಂಗಳೂರು ನಗರದ ಕೆ.ಸಿ.ವ್ಯಾಲಿಯ ಸಂಸ್ಕರಣ ಘಟಕದಿಂದ ದ್ವಿತೀಯ ಹಂತದಲ್ಲಿ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಏತ ನೀರಾವರಿ ಮೂಲಕ ಆನೇಕಲ್ ತಾಲ್ಲೂಕಿನ 67 ಕೆರೆಗಳನ್ನು ಹಾಗೂ ಕನಕಪುರ ತಾಲ್ಲೂಕಿನ ರಾವುತನಹಳ್ಳ ಮತ್ತು ಮಾವತ್ತೂರು ಕೆರೆಗಳನ್ನು ತುಂಬಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿರುತ್ತದೆ.
ಆ	ಈ ತಾಲ್ಲೂಕಿನ ಕೆರೆಗಳಿಗೆ ಸಂಸ್ಕರಿಸಿದ ನೀರನ್ನು ಯಾವಾಗ ತುಂಬಿಸಲಾಗುವುದು (ಪೂರ್ಣ ಮಾಹಿತಿ ನೀಡುವುದು)	ಈ ಯೋಜನೆಯಲ್ಲಿ ಕೆಳಕಂಡಂತೆ 2 ಪಂಪ್‌ಹೌಸ್‌ಗಳನ್ನು ವಿನ್ಯಾಸಿಸಲಾಗಿರುತ್ತದೆ. 1) ಆನೇಕಲ್ – ಪಂಪ್ ಹೌಸ್ –1 2) ಮುತ್ತಾನಲ್ಲೂರು – ಪಂಪ್ ಹೌಸ್ –2 ಮೇಲ್ಕಂಡ ಎರಡೂ ಪಂಪ್ ಹೌಸ್‌ಗಳ ನಿರ್ಮಾಣ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಆನೇಕಲ್ ಪಂಪ್ ಹೌಸ್ ರಿಂದ ಮುತ್ತಾನಲ್ಲೂರು ಪಂಪ್ ಹೌಸ್ ವರೆಗೆ ವಿನ್ಯಾಸಿಸಲಾಗಿದ್ದ ಏರು ಕೊಳವೆ ಮಾರ್ಗದ ನಿರ್ಮಾಣ ಕಾರ್ಯವು ಪೂರ್ಣಗೊಂಡಿರುತ್ತದೆ. ಉಳಿದಂತೆ ಮುತ್ತಾನಲ್ಲೂರು ಪಂಪ್ ಹೌಸ್‌ನಿಂದ ಏರುಕೊಳವೆ ಮಾರ್ಗದ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿರುತ್ತದೆ. ಈ ಯೋಜನೆಯಲ್ಲಿ ವಿವಿಧ ವ್ಯಾಸದ 68.691 ಕಿ.ಮೀ ಉದ್ದದ ಎಂ.ಎಸ್. ಪೈಪು ಗಳನ್ನು ಹಾಗೂ 28.406 ಕಿ.ಮಿ. ಉದ್ದದ ಹೆಚ್.ಡಿ.ಪಿ.ಇ. ಪೈಪುಗಳನ್ನು ಅಳವಡಿಸಲು ವಿನ್ಯಾಸಿಸಲಾಗಿದೆ. ವಿನ್ಯಾಸಿತ 68.691 ಕಿ.ಮೀ. ಉದ್ದದ ಎಂ.ಎಸ್. ಪೈಪುಗಳ ಪೈಕಿ 66.053 ಕಿ.ಮೀ. ಉದ್ದದ ಪೈಪುಗಳ ನಿರ್ಮಾಣ ಕಾರ್ಯವು ಪೂರ್ಣಗೊಂಡಿದ್ದು, ಉಳಿದ 2.638 ಕಿ.ಮಿ. ಪೈಪಲೈನ್ ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿದೆ ಹಾಗೂ ವಿನ್ಯಾಸಿತ 28.406 ಕಿ.ಮಿ. ಉದ್ದದ ಹೆಚ್.ಡಿ.ಪಿ.ಇ. ಪೈಪುಗಳ ಪೈಕಿ 24.50 ಕಿ.ಮೀ ಉದ್ದದ ಪೈಪುಗಳನ್ನು ಅಳವಡಿಸಲಾಗಿದ್ದು, ಉಳಿದ 3.906 ಕಿ.ಮೀ. ಉದ್ದದ ಪೈಪುಗಳನ್ನು ಅಳವಡಿಸಬೇಕಾಗಿರುತ್ತದೆ. ಸದರಿ ಕಾಮಗಾರಿಗೆ ಅಗತ್ಯವಿರುವ ನೀರನ್ನು ಪೂರೈಸುವ ಸಂಸ್ಕರಿಸಿದ ನೀರಿನ ಘಟಕವು BWSSB ರವರಿಂದ ನಿರ್ಮಾಣ ಹಂತದಲ್ಲಿದ್ದು, ನೀರು ಲಭ್ಯವಾದ ನಂತರ ಟ್ರಯಲ್ ರನ್ ಮಾಡಿ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಉದ್ದೇಶಿಸಲಾಗಿದೆ.

		ಚಂದಾಪುರ ಕೆರೆಯ ಬಳಿ ಬರುವ ರಾಜಾಕಾಲುವೆ ಅಂಚಿನಲ್ಲಿ ಏರುಕೊಳವೆ ಮಾರ್ಗ ಕೊಂಡೊಯ್ಯಲು ಚಂದಾಪುರ ಗ್ರಾಮಸ್ಥರು ಅಡಚಣೆ ಉಂಟು ಮಾಡಿರುವುದರಿಂದ ಕೆರೆ ಮತ್ತು ರಾಜಾಕಾಲುವೆಯ ಗಡಿ ಗುರುತಿಸಲು ಸರ್ವೆ ಕಾರ್ಯ ನಡೆಸಲಾಗಿದ್ದು, ಗ್ರಾಮಸ್ಥರು ಒತ್ತುವರಿ ಮಾಡಿರುವುದು ಕಂಡುಬಂದಿರುತ್ತದೆ. ಒತ್ತುವರಿ ತೆರವುಗೊಳಿಸಿ, 1.20ಕಿ.ಮೀ ಪೈಪ್‌ಲೈನ್ ಕಾಮಗಾರಿ ಯನ್ನು ಪೂರ್ಣಗೊಳಿಸಲಾಗುವುದು. ಹೊಸಹಳ್ಳಿ ಗ್ರಾಮದ ಬಳಿ 300ಮೀ. ಮತ್ತು ಎಲ್ಲಮ್ಮನ ನಗರ (ಚಂದಾಪುರ NHAI ಸರ್ವಿಸ್ ರಸ್ತೆ) ಬಳಿ 260.ಮೀ ರಸ್ತೆ ಅಗೆದು ಪೈಪ್‌ಲೈನ್ ಅಳವಳವಡಿಸುವ ಕಾಮಗಾರಿಗೆ ಗ್ರಾಮಸ್ಥರು ಅಡಚಣೆ ಉಂಟು ಮಾಡಿರುವುದರಿಂದ ಕಾಮಗಾರಿಯು ಸ್ಥಗಿತಗೊಂಡಿರುತ್ತದೆ. ಚಂದಾಪುರದಿಂದ ದೊಮ್ಮಸಂದ್ರಕ್ಕೆ ಹೋಗುವ ರಸ್ತೆಯಲ್ಲಿ ಬರುವ ರಾಮಸಾಗರ ಗ್ರಾಮದ ಹತ್ತಿರ 503ಮೀ. ಉದ್ದದ ಪೈಪ್ ಲೈನ್ ಅನ್ನು ಲೋಕೋಪಯೋಗಿ ಇಲಾಖೆಯ ರಸ್ತೆಯ shoulder ನಲ್ಲಿ ಅಳವಡಿಸಲು ಲೋಕೋಪಯೋಗಿ ಇಲಾಖೆಯ ಅನುಮತಿ ಪಡೆಯಲಾಗುತ್ತಿದೆ. ಮೇಲ್ಕಂಡ ಎಲ್ಲಾ ಅಡೆತಡೆಗಳನ್ನು ನಿವಾರಿಸಿಕೊಂಡು BWSSB ರವರಿಂದ ನಿರ್ಮಾಣ ಹಂತದಲ್ಲಿರುವ ಸಂಸ್ಕರಿಸಿದ ನೀರಿನ ಘಟಕದಿಂದ ನೀರು ಲಭ್ಯವಾದ ನಂತರ ಉದ್ದೇಶಿತ ಕೆರೆಗಳಿಗೆ ನೀರು ತುಂಬಿಸಲು ಕ್ರಮ ವಹಿಸಲಾಗುವುದು.

ಕಡತ ಸಂಖ್ಯೆ: MID 166 LAQ 2021

(ಜೆ.ಸಿ.ಮಾಧುಸ್ವಾಮಿ)
ಸಣ್ಣ ನೀರಾವರಿ ಸಚಿವರು.

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2493
2. ಸದಸ್ಯರ ಹೆಸರು : ಶ್ರೀ ಶರತ್ ಕುಮಾರ್ ಬಚ್ಚೇಗೌಡ.
3. ಉತ್ತರಿಸಬೇಕಾದ ದಿನಾಂಕ : 16.03.2021
4. ಉತ್ತರಿಸುವ ಸಚಿವರು : ಸಣ್ಣ ನೀರಾವರಿ ಸಚಿವರು.

ಕ್ರ. ಸಂ.	ಪ್ರಶ್ನೆಗಳು	ಉತ್ತರಗಳು
ಅ	ಹೊಸಕೋಟೆ ವಿಧಾನಸಭಾ ಕ್ಷೇತ್ರಕ್ಕೆ 2019 ರಲ್ಲಿ ರೂ.100.00 ಕೋಟಿಗಳ ವೆಚ್ಚದಲ್ಲಿ ಮಂಜೂರಾದ ವೆಂಗಯ್ಯನಕೆರೆ ಏತ ನೀರಾವರಿಯು ಯಾವಾಗ ಪೂರ್ಣಗೊಳ್ಳಲಿದೆ?	ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕಿನ 30 ಕೆರೆಗಳಿಗೆ ಕೆ.ಆರ್.ಪುರಂ ಎಸ್.ಟಿ.ಪಿ ಯಿಂದ ಸಂಸ್ಕರಿಸಿದ ತ್ಯಾಜ್ಯ ನೀರನ್ನು ತುಂಬಿಸುವ ಏತ ನೀರಾವರಿ ಯೋಜನೆ ನಿರ್ಮಾಣ ಕಾಮಗಾರಿಯನ್ನು ರೂ.100.00 ಕೋಟಿ ಅಂದಾಜು ಮೊತ್ತದೊಂದಿಗೆ ಕೈಗೊಳ್ಳಲು ಅನುಮೋದನೆ ನೀಡಲಾಗಿದ್ದು, ಸದರಿ ಯೋಜನೆಯನ್ನು ಆಗಸ್ಟ್- 2022 ರೊಳಗಾಗಿ ಪೂರ್ಣಗೊಳಿಸಲು ಉದ್ದೇಶಿಸಲಾಗಿತ್ತು.
ಆ	ಈ ಯೋಜನೆಯಿಂದ ತಾಲ್ಲೂಕಿನ ಎಷ್ಟು ಕೆರೆಗಳಿಗೆ ನೀರು ತುಂಬಿಸಲಾಗುವುದು.	
ಇ	ಈ ಯೋಜನೆಯಿಂದ ಇನ್ನಷ್ಟು ಕೆರೆಗಳಿಗೆ ನೀರು ತುಂಬಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ? ಹಾಗಿದ್ದಲ್ಲಿ ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು?	ಈ ಯೋಜನೆಯಲ್ಲಿ ಕೆ.ಆರ್.ಪುರಂ STP ಯಿಂದ ಒಟ್ಟು 40 MLD ನೀರನ್ನು ಹೊಸಕೋಟೆ ತಾಲ್ಲೂಕಿನ 30 ಕೆರೆಗಳಿಗೆ ತುಂಬಿಸಲು ಉದ್ದೇಶಿಸಲಾಗಿತ್ತು. ಆದರೆ ಕೆ.ಆರ್.ಪುರಂ STP ನಲ್ಲಿ ಉತ್ಪತ್ತಿಯಾಗುವ ಒಟ್ಟು 40 MLD ನೀರಿನ ಪೈಕಿ 25 MLD ನೀರು ಲಭ್ಯವಾಗುತ್ತಿದ್ದು, ಮೇಡಹಳ್ಳಿ STP ಯಿಂದ 15 MLD ನೀರನ್ನು ಹಾಗೂ ಕಾಡುಗೋಡಿ STP ಯಿಂದ 03 MLD ನೀರನ್ನು ಸೇರಿದಂತೆ ಒಟ್ಟಾರೆ 43 MLD ನೀರನ್ನು ಈ ಯೋಜನೆಯಡಿ ಬಳಸಿಕೊಂಡು ಹೊಸಕೋಟೆ ತಾಲ್ಲೂಕಿನ ಹೆಚ್ಚುವರಿ 8 ಕೆರೆಗಳಿಗೆ ನೀರನ್ನು ತುಂಬಿಸಲು ಉದ್ದೇಶಿಸಲಾಗಿದೆ. ಅದರಂತೆ ಸದರಿ ಯೋಜನೆಯನ್ನು ಪುನರ್ ಪರಿಶೀಲಿಸಿ ಪರಿಷ್ಕರಿಸಲಾಗಿದ್ದು, ಈ ಯೋಜನೆಯಲ್ಲಿ ಹೊಸಕೋಟೆ ತಾಲ್ಲೂಕಿನ ಒಟ್ಟು 38 ಕೆರೆಗಳನ್ನು ತುಂಬಿಸುವ ರೂ.149.85 ಕೋಟಿ ಅಂದಾಜು ಮೊತ್ತದ ಪರಿಷ್ಕೃತ ಯೋಜನೆಗೆ ಅನುಮೋದನೆ ನೀಡಲಾಗಿರುತ್ತದೆ. ಈ ಯೋಜನೆಯಲ್ಲಿ ನೀರು ತುಂಬಿಸುವ ಕೆರೆಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಕಡತ ಸಂಖ್ಯೆ: MID 165 LAQ 2021

(ಜೆ.ಸಿ.ಮಾಧುಸ್ವಾಮಿ)
ಸಣ್ಣ ನೀರಾವರಿ ಸಚಿವರು.